# ಗಣಿತ

## ಭಾಗ - 2

## ತರಗತಿ

# IV

Mathematics
Part - 2
STD-IV
Kannada Medium

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ,
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ,
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# ಗಣಿತ

**4**

*Prepared by :*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2025
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಹೊಸ ಪಠ್ಯಪುಸ್ತಕದ ಮೊದಲ ಭಾಗದ ಮೂಲಕ ಯಾವೆಲ್ಲಾ ಹೊಸ ವಿಷಯಗಳನ್ನು ಕಲಿತಿದ್ದೀರಿ? ಹೊಸ ಆಕೃತಿಗಳನ್ನು ರಚಿಸಲು ಮತ್ತು ಹೊಸ ಪ್ಯಾಟರ್ನ್‌ಗಳನ್ನು ರಚಿಸಲು ಕಲಿತಿದ್ದೀರಿ. ಸಂಖ್ಯೆಗಳ ನಡುವಿನ ಹೊಸ ಸಂಬಂಧಗಳ ಬಗ್ಗೆ ಹೆಚ್ಚಿನ ಅರಿವು ಗಳಿಸಿದ್ದೀರಿ. ಮೂರಂಕೆ ಸಂಖ್ಯೆಗಳನ್ನೂ ದಾಟಿ ನಾಲ್ಕಂಕೆ ಸಂಖ್ಯೆಗಳ ಕುರಿತಾದ ಮೂಲಭೂತ ಜ್ಞಾನವನ್ನು ಸಹ ಪಡೆದುಕೊಂಡಿದ್ದೀರಿ. ದೂರ ಮತ್ತು ತೂಕದ ಬಗ್ಗೆ ಕಲಿಯಲು ಬಹಳಷ್ಟು ಇದೆ. ಗುಣಾಕಾರ ಮತ್ತು ಭಾಗಾಕಾರದ ಬಗ್ಗೆ ಇನ್ನಷ್ಟು ಕಲಿಯಬೇಕಾಗಿದೆ. ಗುಣಾಕಾರ ಮತ್ತು ಭಾಗಾಕಾರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿಶ್ಲೇಷಿಸಬೇಕು. ವಿಭಿನ್ನ ಮಾರ್ಗಗಳನ್ನು ಕಂಡುಕೊಂಡು ಅವುಗಳನ್ನು ಪರಿಹರಿಸಬೇಕು. ಗಣಿತದ ಚಿಂತನೆಯ ಮೂಲಕ... ಗಣನ ಚಿಂತನೆಯ ಮೂಲಕ... ಹೊಸ ಗಣಿತದ ಮಾರ್ಗಗಳನ್ನು ಹುಡುಕಬೇಕು. ಗಣಿತದ ಕಲಿಕೆಯನ್ನು ವಿಭಿನ್ನ ರೀತಿಯಲ್ಲಿ ಆಸಕ್ತಿದಾಯಕವಾಗಿಸೋಣ... ಮತ್ತು ಇನ್ನೂ ಎತ್ತರಕ್ಕೆ ಏರೋಣ.

ಶುಭಹಾರೈಕೆಗಳೊಂದಿಗೆ,

ಡಾ. ಜಯಪ್ರಕಾಶ್ ಆರ್. ಕೆ.
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

## TEXT BOOK DEVELOPMENT TEAM

### Adviser

**Dr. E. Krishnan**
Head, Department of Mathematics (Retd.),
University College, Thiruvananthapuram

### Chairperson

**Dr. Gokuladasan Pillai C.**
Curriculum Head (Retd.),
S.C.E.R.T.

### Experts

**Dr. Rajesh K. P.**
Senior Lecturer, DIET, Kannur

**Prakashan V. K.**
Principal (Retd.), DIET, Kottayam

### Members

**Swaminathan K.**
Headmaster (Retd),
Govt. LP School, Palode,
Thiruvananthapuram

**Biju T.**
Headmaster,
Govt. S.M.V.L.P.S.
Tevalakkara, Kollam

**Aishwarya Soman**
S.M.S.G.U.P.S.
Chandanakunnu,
Pathanamthitta

**Srivishakhan N**
Headmaster (Retd.)
G.L.P. School
Cherukulathur, Kozhikode

**Beena Stephen**
S. P. T. P. M. Govt.U.P.S.
Kuravankonam,
Thiruvananthapuram

**Jiji Varghese P.**
Trainer, B.R.C. Edapall

**Premjith V. R.**
H.S.T., G.V.H.S.S. Payyoli,
Kozhikode

**Bhagyesh K.**
S.V.M.G.U.P.S. Edathod,
Kasaragod

**Anoop K. P.**
Art Teacher
P.M.S.A.P.T.H.S.S. Kakov,
Vazhayur, Malappuram

**Shaji C. K.**
Art Teacher
G.H.S.S. Naduvannur,
Kozhikode

**Deepesh T.**
Art Teacher
C.H.M.H.S.S.
Kavumpady, Kannur

**Bijesh M.**
Art teacher, M.S.P.H.S.S,
Malappuram

### Kannada Version

Experts :- **Nandikeshan N.,** D.D.E. (Retd.), Kasaragod
**Yatheesh Kumar Rai K.,** Principal(Retd.), G.H.S.S. Bellur, Kasaragod

Participants :- **Shylesh M.,** Headmaster, S.S.A.L.P.S. Mudoorthoke
**Gururaj K.,** G.H.S. Udyawar, Kasaragod
**Devananda K.,** G.L.P.S. Majibail, Kasaragod
**Melvin D Souza P.,** G.H.S.S. Bekur, Kasaragod

---

Academic Co-ordinator

**Dr. Selvamari S.**
Research Officer, S.C.E.R.T. Kerala

---

**State Council of Educational Research and Training (SCERT)**
Vidyabhavan, Poojappura, Thiruvananthapuram 695012

# ಅನುಕ್ರಮಣಿಕೆ


| | | |
|---|---|---|
| 7. | ಗುಣಾಕಾರದ ಹಿರಿಮೆ | 103 |
| 8. | ಹೀಗೆ ಅಳೆಯುವ | 121 |
| 9. | ಸಮಾನವಾದ ಗುಂಪು | 139 |
| 10. | ಅಳೆದೂ ತೂಕ ಮಾಡಿಯೂ | 163 |
| 11. | ಕಥೆ ಹೇಳುವ ಚಿತ್ರಗಳು | 173 |




ಪುಸ್ತಕದಲ್ಲಿ **'ಲೆಕ್ಕ ಮಾಡಿ ನೋಡುವ'** ಎಂಬ ಚಟುವಟಿಕೆಗೆ ಈ ಚಿಹ್ನೆಯನ್ನು ಉಪಯೋಗಿಸಲಾಗಿದೆ.

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 7
# ಗುಣಾಕಾರದ ಹಿರಿಮೆ




ಅಯನಿಮಲೆ ಸರಕಾರಿ ಎಲ್.ಪಿ. ಶಾಲೆಯ ಮಕ್ಕಳು, ಅಧ್ಯಾಪಕರು ಮತ್ತು ರಕ್ಷಕರು ಸೇರಿ ಗಣಿತಪೆಟ್ಟಿಗೆಯನ್ನು ತಯಾರಿಸುತ್ತಿದ್ದಾರೆ.

## ಮೇಧಳ ಗಣಿತಪೆಟ್ಟಿಗೆ

ಮೇಧ ತಯಾರಿಸಿದ ಗಣಿತಪೆಟ್ಟಿಗೆಯಲ್ಲಿರುವ ಟೋಕನ್ ಬೋರ್ಡ್ ನೋಡಿರಿ.



ಟೋಕನ್ ಬೋರ್ಡ್ ನೋಡಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಸಾಲು | 1 | 2 | 3 | ಒಟ್ಟು | |
|---|---|---|---|---|---|
| | | | | ಸಾಲು | ಸಂಖ್ಯೆ |
| ಸಂಖ್ಯೆ | | | | | |

8 ಟೋಕನ್‌ಗಳಂತೆ 3 ಸಾಲು. ಒಟ್ಟು ಎಷ್ಟು ಟೋಕನ್‌ಗಳು?

$8 + 8 + 8$ =........... × .............. = ☐

## ಮಾಧವನ ಗಣಿತಪೆಟ್ಟಿಗೆ

ಮಾಧವ ಟೋಕನ್ ಬೋರ್ಡನ್ನು ಇನ್ನೊಂದು ರೀತಿಯಲ್ಲಿ ಇರಿಸಿದನು. ಇದರಲ್ಲಿ ಎಷ್ಟು ಟೋಕನ್‌ಗಳಿವೆ?



$3 + 3 + 3 + 3 + 3 + 3 + 3 + 3 =$ _______ × _______







3 ಸಲ 8

$3 \times 8 =$

8 ಸಲ 3

$8 \times 3 =$

3 ಸಲ 8 ಮತ್ತು 8 ಸಲ 3 ಎಂದರೆ 24 ಆಗಿದೆ.

$3 \times 8 = 8 \times 3 = 24$

• ಸಿಯು 24 ಟೋಕನ್‌ಗಳನ್ನು ಇನ್ನೊಂದು ರೀತಿಯಲ್ಲಿ ಇರಿಸಿರುವುದನ್ನು ನೋಡಿರಿ.







$3 \times 8$ $\quad$ $3 \times 8 = 3 \times 2 \times 4$ $\quad$ $3 \times 2 \times 4$

• 24 ಟೋಕನ್‌ಗಳನ್ನು ಈ ರೀತಿಯಲ್ಲೂ ಇರಿಸಬಹುದಲ್ಲವೇ?







$4 \times 6$ $\quad$ $4 \times 6 = 2 \times 4 \times 3$ $\quad$ $2 \times 4 \times 3$

8 ರಂತೆ ಇರುವ 4 ಸಾಲುಗಳಾದರೆ ಒಟ್ಟು ಎಷ್ಟು ಟೋಕನ್‌ಗಳು?

........... + .............. +........... + ........... =

........... × .............. = ☐

$4 \times 8$ = 2 × ..............× .............

8 ರಂತೆ ಇರುವ 6 ಸಾಲುಗಳಾದರೆ ಒಟ್ಟು ಎಷ್ಟು ಟೋಕನ್‌ಗಳು?

32 + .............. = ☐

$6 \times 8$ =........... × ..............× ..............

## ಟೋಕನ್‌ಗಳಿಂದ ಆಯತ

ಶ್ರಾವ್ಯಾಳ ಟೋಕನ್ ಬೋರ್ಡ್ ನೋಡಿರಿ.



ಚಿತ್ರದಲ್ಲಿ ಒಟ್ಟು ಎಷ್ಟು ಟೋಕನ್‌ಗಳಿವೆ?



8 ಟೋಕನ್‌ಗಳಂತೆ 12 ಸಾಲು

12 ಸಾಲುಗಳನ್ನು 10 ಮತ್ತು 2 ಆಗಿ ಬದಲಾಯಿಸಿದರೊ?



| ದೊಡ್ಡ ಆಯತದಲ್ಲಿರುವ ಟೋಕನ್‌ಗಳು | ಸಣ್ಣ ಆಯತದಲ್ಲಿರುವ ಟೋಕನ್‌ಗಳು |
|---|---|
| ಒಂದು ಸಾಲಿನಲ್ಲಿರುವ ಟೋಕನ್‌ಗಳು = ☐ | ಒಂದು ಸಾಲಿನಲ್ಲಿರುವ ಟೋಕನ್‌ಗಳು = ☐ |
| ಸಾಲುಗಳ ಸಂಖ್ಯೆ = ☐ | ಸಾಲುಗಳ ಸಂಖ್ಯೆ = ☐ |
| ಒಟ್ಟು ಟೋಕನ್‌ಗಳು ...... × ...... = ☐ | ಒಟ್ಟು ಟೋಕನ್‌ಗಳು ...... × ...... = ☐ |

ಬೋರ್ಡ್‌ನಲ್ಲಿರುವ ಒಟ್ಟು ಟೋಕನ್‌ಗಳು.

$(10 \times 8) + (2 \times 8)$

$80 + 16 = 96$

ಟೋಕನ್‌ಗಳಿಲ್ಲದೆ ಹೀಗೆಯೂ ಲೆಕ್ಕ ಹಾಕಬಹುದು.

| | 10 | 2 |
|---|---|---|
| 8 | $10 \times 8 = 80$ | $2 \times 8 = 16$ |

**80 + 16 = 96**

**ಹೀಗೆಯೂ ಲೆಕ್ಕ ಹಾಕಬಹುದು**

```
   12 ×
    8
  ------
   16 → 8 × 2
   80 → 8 × 10
  ------
   96
```

12 × 8 ನ್ನು ಕಂಡುಹಿಡಿಯಲು 10 ನ್ನು 8 ರಿಂದ ಗುಣಿಸಿದ ಸಂಖ್ಯೆಗೆ 2 ನ್ನು 8 ರಿಂದ ಗುಣಿಸಿದ ಸಂಖ್ಯೆಯನ್ನು ಕೂಡಿಸಿದರೆ ಸಾಕು.

## ಗುಣಿಸಿ ಲೆಕ್ಕಮಾಡುವ

**13 × 5**

| | 10 | 3 |
|---|---|---|
| 5 | $10 \times 5 = ....$ | $3 \times 5 = ....$ |
| | .... + .... = .... | |

**23 × 5**

| | 20 | 3 |
|---|---|---|
| 5 | $20 \times 5 = ....$ | $3 \times 5 = ....$ |
| | .... + .... = .... | |

ಈ ರೀತಿಯಲ್ಲಿ 14 × 6, 24 × 3 ಎಂಬಿವುಗಳನ್ನು ನೋಟ್ ಪುಸ್ತಕದಲ್ಲಿ ಚಿತ್ರಿಸಿರಿ.

## ಪೂರ್ತಿಗೊಳಿಸಿರಿ

18 × 5 = (10 × 5) + (8 × 5) = 50 + 40 = 90

16 × 5 = (.....× 5) + (.... × 5) = .... + .... = ....

13 × .... = (10 × 3) + (.... × 3) = .... + .... = ....

.... × 4 = (10 × 4) + (3 × 4) = .... + .... = ....

.... × .... = (10 × 7) + (3 × 7) = .... + .... = ....

## ಗುಣಾಕಾರ ಎಷ್ಟು ಸುಲಭ

- 15 × 30 ಎಷ್ಟೆಂದು ಕಂಡುಹಿಡಿಯಬಹುದೇ?

  15 × 30 = (10 × 30) + (5 × 30) = ............ + ............ = ............

  ಬೇರೇನಾದರೂ ದಾರಿಯಿದೆಯೇ?

  15 × 3 ಎಷ್ಟಾಗಿದೆ?

  15 × 30 ಆದರೋ?

- 40 × 30 ಎಷ್ಟಾಗಿದೆ?

  4 × 3 = ...........    10 × 10 = ...........    40 × 30 = ..........

- 70 × 70 ಎಷ್ಟಾಗಿದೆ?

  7 × 7 = ...........    10 × 10 = ...........    70 × 70 = ...........

ಇನ್ನು ಇವುಗಳನ್ನು ಬಾಯಿಲೆಕ್ಕವಾಗಿ ಹೇಳಿರಿ. 30 × 3, 60 × 4, 50 × 3, 40 × 40

## ಪೂರ್ತಿಗೊಳಿಸಿರಿ.

- 24 ಟೋಕನ್‌ಗಳನ್ನು ಯಾವ ಯಾವ ರೀತಿಯ ಆಯತಾಕಾರವಾಗಿ ಕ್ರಮೀಕರಿಸಬಹುದು?




3 × 8 = 3 × .... × 4 = 24
2 × 12 = 2 × 4 × .... = 24
2 × 12 = .... × 6 × .... = 24

4 × 6 = 4 × .... × .... = 24
3 × 12 = .... × .... × .... = ....
3 × 12 = .... × .... × 6 = ....

## ಹಾಲು ವಿತರಣೆ

ಅಯನಿಮಲೆ ಶಾಲೆಯ ಮಕ್ಕಳಿಗೆ ಹಾಲು ಕುಡಿಯಲು ಅಗತ್ಯವಾದ ಲೋಟಗಳನ್ನು ಗ್ರಾಮಪಂಚಾಯತ್ ನೀಡಿತು. ಒಂದು ಪೆಟ್ಟಿಗೆಯಲ್ಲಿ ಅರ್ಧ ಡಜನ್ ಲೋಟಗಳಿವೆ. ಇಂತಹ 21 ಪೆಟ್ಟಿಗೆಗಳಿದ್ದವು. ಶಾಲೆಗೆ ಲಭಿಸಿದ ಒಟ್ಟು ಲೋಟಗಳೆಷ್ಟು?




| ನಾನು ಲೆಕ್ಕಮಾಡಿದ ರೀತಿ | ಸಹಪಾಠಿ ಲೆಕ್ಕಮಾಡಿದ ರೀತಿ |
| --- | --- |
| | |

- ಗ್ರಾಮಪಂಚಾಯತ್ ವತಿಯಿಂದ ಪುರವನಂ ಶಾಲೆಗೆ ಒಂದು ಡಜನ್ ಲೋಟಗಳಿರುವ 9 ಪೆಟ್ಟಿಗೆಗಳನ್ನು ನೀಡಲಾಯಿತು.

  ಲಭಿಸಿದ ಒಟ್ಟು ಲೋಟಗಳೆಷ್ಟು?

  (ಬಾಯಿಲೆಕ್ಕವಾಗಿ ಕಂಡುಹಿಡಿಯಬಹುದೇ?)

### ಪಝಿಲ್ ಕಾರ್ನರ್

- ಒಂದು ಸಂಖ್ಯೆಯನ್ನು 8 ರಿಂದ ಗುಣಿಸಿದರೆ 120 ಸಿಗುವುದು. ಅದರ ಮುಂದಿನ ಸಂಖ್ಯೆಯನ್ನು 8 ರಿಂದ ಗುಣಿಸಿದರೆ ಎಷ್ಟು ಹೆಚ್ಚಾಗುವುದು?
- ಒಂದು ಸಂಖ್ಯೆಯನ್ನು 4 ರಿಂದ ಗುಣಿಸಿದರೆ 4172 ಸಿಗುವುದು. ಅದರ ಮುಂದಿನ ಸಂಖ್ಯೆಯನ್ನು 4 ರಿಂದ ಗುಣಿಸಿದರೆ ಎಷ್ಟು ಲಭಿಸುವುದು?
- ಒಂದು ಸಂಖ್ಯೆಯನ್ನು 7 ರಿಂದ ಗುಣಿಸಿದರೆ 238 ಸಿಗುವುದು. ಆ ಸಂಖ್ಯೆಯ ಹಿಂದಿನ ಸಂಖ್ಯೆಯನ್ನು 7 ರಿಂದ ಗುಣಿಸಿದರೆ ಎಷ್ಟು ಲಭಿಸುವುದು?

## ಗ್ರಾಮಪಂಚಾಯತ್‌ನ ಸಹಾಯ

ಮಿತ್ರಳ ಶಾಲೆಗೆ ಗ್ರಾಮಪಂಚಾಯತು ಹೊಸ ಡೆಸ್ಕುಗಳನ್ನು ಮತ್ತು ಕುರ್ಚಿಗಳನ್ನು ಒದಗಿಸಿತು. ಒಂದು ಡೆಸ್ಕಿಗೆ 4 ಕುರ್ಚಿಗಳಂತೆ ನೀಡಲಾಗಿದೆ. ಪ್ರತಿಯೊಂದು ತರಗತಿಗೆ ನೀಡಿದ ಡೆಸ್ಕುಗಳ ಸಂಖ್ಯೆಯನ್ನು ಕೆಳಗೆ ನೀಡಲಾಗಿದೆ. ನೀಡಿದ ಒಟ್ಟು ಡೆಸ್ಕು ಮತ್ತು ಕುರ್ಚಿಗಳ ಸಂಖ್ಯೆ ಎಷ್ಟು?

| ತರಗತಿ | ಡೆಸ್ಕುಗಳು |
|---|---|
| ತರಗತಿ 1 | 8 |
| ತರಗತಿ 2 | 7 |
| ತರಗತಿ 3 | 9 |
| ತರಗತಿ 4 | 5 |



ಒಟ್ಟು ಎಷ್ಟು?

ಡೆಸ್ಕುಗಳು [ ]

ಕುರ್ಚಿಗಳು [ ]

| ನಾನು ಲೆಕ್ಕಮಾಡಿದ ರೀತಿ | ಸಹಪಾಠಿ ಲೆಕ್ಕ ಮಾಡಿದ ರೀತಿ |
|---|---|
| | |

ಒಂದು ಡೆಸ್ಕಿನ ಹಿಂದೆ 5 ಕುರ್ಚಿಗಳಂತೆ ಇರಿಸಲು ಒಟ್ಟು ಎಷ್ಟು ಕುರ್ಚಿಗಳು ಬೇಕಾಗಬಹುದು? ಹೇಗೆ ಲೆಕ್ಕ ಮಾಡಬಹುದು?

**ನಾನು ಲೆಕ್ಕ ಮಾಡಿದ ರೀತಿ**

## ನಮೂನೆ ಮುಂದುವರಿಸಿರಿ... ಸಂಖ್ಯಾ ಸಂಬಂಧ ಕಂಡುಹಿಡಿಯಿರಿ.

$(1 \times 9) + 1 = 10$

$(2 \times 9) + 2 = 20$

$(3 \times 9) + 3 = 30$

..................................

..................................

..................................

..................................

..................................

..................................

$(10 \times 9) +$ ...... $= 100$

**ನಾನು ಕಂಡುಹಿಡಿದದ್ದು**

ಈ ಸಂಖ್ಯಾ ನಮೂನೆಯನ್ನು ಉಪಯೋಗಿಸಿ ಕೆಳಗೆ ನೀಡಿದವುಗಳ ಉತ್ತರಗಳನ್ನು ಕಂಡುಹಿಡಿಯಿರಿ.

- $(15 \times 9) + 15 =$......
- $(78 \times 9) + 78 =$......
- $(43 \times 9) + 43 =$......
- .................................

- 10 ರಿಂದಲೂ 20 ರಿಂದಲೂ ಗುಣಿಸಲಿರುವ ಸುಲಭ ದಾರಿಯನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | | |
|---|---|---|
| 10 × 10 = 100 | 10 × 20 = .... | 10 × 10 = .... |
| 11 × 10 = 110 | 11 × 20 = .... | 20 × 20 = .... |
| 13 × 10 = .... | 13 × 20 = 260 | 30 × 30 = .... |
| 16 × 10 = .... | 16 × 20 = 320 | 40 × 40 = .... |
| 19 × 10 = .... | 19 × 20 = .... | 50 × 50 = .... |
| ......................... | ......................... | .... × .... = .... |
| ......................... | ......................... | .... × .... = .... |
| ......................... | ......................... | ... × .... = .... |
| ......................... | ......................... | 90 × 90 = .... |

ಇದೇ ರೀತಿ 30, 40, 50 ಎಂಬೀ ಸಂಖ್ಯೆಗಳಿಂದ ಹೇಗೆ ಸುಲಭವಾಗಿ ಗುಣಿಸಬಹುದೆಂದು ಕಂಡುಹಿಡಿದು ನೋಟ್ ಪುಸ್ತಕದಲ್ಲಿ ಬರೆಯಿರಿ.

## ಪೂರ್ತಿಗೊಳಿಸಿರಿ... ಸಂಬಂಧ ಕಂಡುಹಿಡಿಯಿರಿ.

$1 \times 8 = 8$

$2 \times 8 = 16$

.................

.................

.................

.................

.................

.................

.................

$10 \times 8 =$ .....

$(1 \times 8) + (1 \times 6) = 1 \times 14$

$(2 \times 8) + (2 \times 6) = 2 \times 14$

$1 \times 6 = 6$

$2 \times 6 = 12$

.................

.................

.................

.................

.................

.................

.................

$10 \times 6 =$ .....

$1 \times 14 = 14$

$2 \times 14 =$ .....

....................

....................

....................

....................

....................

....................

....................

$10 \times 14 =$ .....

$1 \times 9 = 9$

$2 \times 9 = 18$

.................

.................

.................

.................

.................

.................

.................

$10 \times 9 =$ .....

$(1 \times 9) + (1 \times 5) = 1 \times 14$

$(2 \times 9) + (2 \times 5) = 2 \times 14$

$1 \times 5 = 5$

$2 \times 5 = 10$

.................

.................

.................

.................

.................

.................

.................

$10 \times 5 =$ .....

### ನಾನು ಲೆಕ್ಕಮಾಡಿದ ರೀತಿ

## ಬಿಲ್ ಪೂರ್ತಿಗೊಳಿಸುವ

ಶಾಲಾ ಸ್ಟೋರ್‌ನಿಂದ ಪ್ರತಿಯೊಂದು ತರಗತಿಯ ಮಕ್ಕಳು ಖರೀದಿಸಿದ ಸಾಮಗ್ರಿಗಳ ಬಿಲ್ ನೋಡಿರಿ. ಬಿಲ್ ಪೂರ್ತಿಗೊಳಿಸಿರಿ.

| ಬೆಲೆ ವಿವರ ಪಟ್ಟಿ | |
|---|---|
| **ವಸ್ತುಗಳು** | **ಬೆಲೆ** |
| ಪೆನ್ಸಿಲ್ ಕಟ್ಟರ್ | 1 ರೂಪಾಯಿ |
| ರಬ್ಬರ್ | 2 ರೂಪಾಯಿ |
| ಪೆನ್ಸಿಲ್ | 3 ರೂಪಾಯಿ |
| ಸ್ಕೇಲ್ | 12 ರೂಪಾಯಿ |
| ನೋಟ್ ಪುಸ್ತಕ | 15 ರೂಪಾಯಿ |
| ಪೆನ್ನು | 6 ರೂಪಾಯಿ |
| ಬ್ರಶ್ | 7 ರೂಪಾಯಿ |
| ಬಾಕ್ಸ್ | 25 ರೂಪಾಯಿ |
| ಕತ್ತರಿ | 30 ರೂಪಾಯಿ |




**ಬಿಲ್ - 1**

| ವಸ್ತು | ಸಂಖ್ಯೆ | ಬೆಲೆ | ಒಟ್ಟು |
|---|---|---|---|
| ಬಾಕ್ಸ್ | 2 | 25 ರೂಪಾಯಿ | .... × .... = .... |
| ಸ್ಕೇಲ್ | 4 | 12 ರೂಪಾಯಿ | .... × .... = .... |
| | | ಒಟ್ಟು ................ | |

**ಬಿಲ್ - 2**

| ವಸ್ತು | ಸಂಖ್ಯೆ | ಬೆಲೆ | ಒಟ್ಟು |
|---|---|---|---|
| ಪೆನ್ಸಿಲ್ | ................ | 3 ರೂಪಾಯಿ | .... × .... = .... |
| ಬ್ರಶ್ | ................ | 7 ರೂಪಾಯಿ | .... × .... = .... |
| | | ಒಟ್ಟು 35 ರೂಪಾಯಿ | |

**ಬಿಲ್ - 3**

| ವಸ್ತು | ಸಂಖ್ಯೆ | ಬೆಲೆ | ಒಟ್ಟು |
|---|---|---|---|
| ನೋಟ್ ಪುಸ್ತಕ | ................ | 15 ರೂಪಾಯಿ | .... × .... = .... |
| ಪೆನ್ಸಿಲ್ | ................ | 3 ರೂಪಾಯಿ | ................ |
| | | | ಒಟ್ಟು 90 ರೂಪಾಯಿ |

**ಬಿಲ್- 4**

| ವಸ್ತು | ಸಂಖ್ಯೆ | ಬೆಲೆ | ಒಟ್ಟು |
|---|---|---|---|
| ಸ್ಕೇಲ್ | ................ | 12 ರೂಪಾಯಿ | .... × .... = .... |
| ಪೆನ್ನು | ................ | 6 ರೂಪಾಯಿ | .... × .... = .... |
| ರಬ್ಬರ್ | ................ | 2 ರೂಪಾಯಿ | .... × .... = .... |
| | | | ಒಟ್ಟು 100 ರೂಪಾಯಿ |

ಜ್ವಾಲ 100 ರೂಪಾಯಿಗೆ 4 ಬಗೆಯ ವಸ್ತುಗಳನ್ನು ಖರೀದಿಸಿದಳು. ಖರೀದಿಸಿದ ವಸ್ತುಗಳು ಯಾವುದಾಗಿರಬಹುದು? ಪ್ರತಿಯೊಂದರ ಸಂಖ್ಯೆ ಎಷ್ಟಾಗಿರಬಹುದು? ನೋಟ್ ಪುಸ್ತಕದಲ್ಲಿ ಬಿಲ್ ತಯಾರಿಸಿರಿ.

### ಪಝಿಲ್ ಕಾರ್ನರ್

**ಆದಿಯ ಉಳಿತಾಯ ಪೆಟ್ಟಿಗೆ**

ಆದಿಯ ಹುಟ್ಟುಹಬ್ಬದಂದು ಅಜ್ಜಿಯು ಉಳಿತಾಯ ಪೆಟ್ಟಿಗೆಗೆ ಹಾಕಲು ಒಂದು ರೂಪಾಯಿ ನೀಡಿದರು. ಮೊದಲ ದಿನ ಲಭಿಸಿದ ಮೊತ್ತದ ಇಮ್ಮಡಿಯಾಗಿದೆ ಎರಡನೇ ದಿನ ಲಭಿಸಿದ್ದು. ಎರಡನೇ ದಿನ ಲಭಿಸಿದ ಮೊತ್ತದ ಇಮ್ಮಡಿಯಾಗಿದೆ ಮೂರನೇ ದಿನ ಲಭಿಸಿದ್ದು. ಈ ರೀತಿ ಮುಂದುವರಿದರೆ ಏಳನೇ ದಿನ ಉಳಿತಾಯ ಪೆಟ್ಟಿಗೆಯಲ್ಲಿ ಇರಬಹುದಾದ ಹಣ ಎಷ್ಟು?



## ಪೆನ್ಸಿಲ್ ಪೆಟ್ಟಿಗೆ



ಮಿನ್ನಳು 5 ಪೆನ್ಸಿಲ್‌ಗಳಂತೆ ಒಂದು ಪ್ಯಾಕೆಟ್‌ನಲ್ಲಿ ಹಾಕಿದಳು. ಇಂತಹ 4 ಪ್ಯಾಕೆಟ್‌ಗಳನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿದಳು. ನನ್ಮ ಸ್ಟೋರ್ ಗೆ 6 ಪೆಟ್ಟಿಗೆ ಹಾಗೂ ಮೇನ್ಮ ಸ್ಟೋರ್‌ಗೆ 4 ಪೆಟ್ಟಿಗೆಯನ್ನು ಕೊಟ್ಟಳು. ಅವಳು ಕೊಟ್ಟ ಒಟ್ಟು ಪೆನ್ಸಿಲ್‌ಗಳು ಎಷ್ಟು?

ಒಂದು ಪೆನ್ಸಿಲ್ ನ ಬೆಲೆ 5 ರೂಪಾಯಿಯಾಗಿದೆ.

ಮಿನ್ನಳಿಗೆ ಲಭಿಸಿದ ಒಟ್ಟು ಹಣವೆಷ್ಟು?

ಒಂದು ಪ್ಯಾಕೆಟ್‌ನಲ್ಲಿರುವ ಪೆನ್ಸಿಲ್‌ಗಳು

ಒಂದು ಪೆಟ್ಟಿಗೆಯಲ್ಲಿರುವ ಒಟ್ಟು ಪೆನ್ಸಿಲ್‌ಗಳು

ನನ್ಮ ಸ್ಟೋರ್‌ಗೆ ಕೊಟ್ಟ ಪೆನ್ಸಿಲ್‌ಗಳು

ಮೇನ್ಮ ಸ್ಟೋರ್‌ಗೆ ಕೊಟ್ಟ ಪೆನ್ಸಿಲ್‌ಗಳು

ಮಿನ್ನಳಿಗೆ ಲಭಿಸಿದ ಹಣ

| ನಾನು ಲೆಕ್ಕಮಾಡಿದ ರೀತಿ | ಸಹಪಾಠಿ ಲೆಕ್ಕ ಮಾಡಿದ ರೀತಿ |
|---|---|
| | |

### ಪಝ್ಲ್ ಕಾರ್ನರ್

ಮಿನ್ನಾಳ ಎರಡು ಕೈಯಲ್ಲೂ ಪೆನ್ಸಿಲ್‌ಗಳಿವೆ. ಎಡ ಕೈಯಿಂದ ಒಂದು ಪೆನ್ಸಿಲ್ ತೆಗೆದು ಬಲದ ಕೈಯಲ್ಲಿ ಇರಿಸಿದರೆ ಅದರ ಸಂಖ್ಯೆ ಎಡದ ಕೈಯಲ್ಲಿರುವ ಸಂಖ್ಯೆಯ ಇಮ್ಮಡಿಯಾಗುವುದು. ಬಲ ಕೈಯಲ್ಲಿರುವ ಒಂದು ಪೆನ್ಸಿಲ್ ತೆಗೆದು ಎಡಕೈಯಲ್ಲಿರಿಸಿದರೆ ಎರಡೂ ಕೈಯಲ್ಲಿರುವ ಪೆನ್ಸಿಲ್‌ಗಳ ಸಂಖ್ಯೆ ಸಮಾನವಾಗುವುದು. ಮಿನ್ನಾಳ ಪ್ರತಿಯೊಂದು ಕೈಯಲ್ಲಿಯೂ ಎಷ್ಟು ಪೆನ್ಸಿಲ್‌ಗಳಿವೆ?

## ಶಾಲಾ ಮಧ್ಯಾಹ್ನದೂಟ ಯೋಜನೆ

ಶ್ಯಾಮಲಕ್ಕ ಅಯನಿಮಲೆ ಶಾಲೆಯಲ್ಲಿ ಮಧ್ಯಾಹ್ನದೂಟ ತಯಾರಿಸುತ್ತಾರೆ. ಒಂದು ದಿನಕ್ಕೆ 600 ರೂಪಾಯಿ ಸಂಬಳ. ಜೂನ್ ತಿಂಗಳಲ್ಲಿ 20 ದಿನ ಆಹಾರ ತಯಾರು ಮಾಡಿದ್ದಾರೆ. ಹಾಗಾದರೆ ಸಂಬಳವಾಗಿ ಎಷ್ಟು ರೂಪಾಯಿ ಲಭಿಸಿತು? ಜುಲೈ ತಿಂಗಳಲ್ಲಿ 22 ದಿನ ಕೆಲಸ ಮಾಡಿದರು. ಜುಲೈ ತಿಂಗಳಲ್ಲಿ ಎಷ್ಟು ರೂಪಾಯಿ ಲಭಿಸಿತು?



| ನಾನು ಲೆಕ್ಕ ಮಾಡಿದ ರೀತಿ | ಸಹಪಾಠಿ ಲೆಕ್ಕ ಮಾಡಿದ ರೀತಿ |
|---|---|
| | |

### 100, 200, 300 ಎಂಬಿವುಗಳಿಂದ ಗುಣಿಸುವ

| | | |
|---|---|---|
| 1 × 100 = 100 | 1 × 200 = 200 | 1 × 300 = 300 |
| 2 × 100 = 200 | 2 × 200 = 400 | 2 × 300 = 600 |
| 3 × 100 = 300 | 3 × 200 = 600 | 3 × 300 = 900 |
| 5 × 100 = ....... | 5 × 200 = ....... | 5 × 300 = ....... |
| 8 × 100 = ....... | 8 × 200 = ....... | 8 × 300 = ....... |
| 10 × 100 = ....... | 10 × 200 = ....... | 10 × 300 = ....... |
| 12 × 100 = ....... | 12 × 200 = ....... | 12 × 300 = ....... |
| 15 × 100 = ....... | 15 × 200 = ....... | 15 × 300 = ....... |
| 18 × 100 = ....... | 18 × 200 = ....... | 18 × 300 = ....... |
| 20 × 100 = ....... | 20 × 200 = ....... | 20 × 300 = ....... |
| 100 × 100 = ....... | 100 × 200 = ....... | 100 × 300 = ....... |

100, 200, 300 ಎಂಬೀ ಸಂಖ್ಯೆಗಳಿಂದ ಗುಣಿಸಲಿರುವ ಸುಲಭ ದಾರಿಯನ್ನು ನೋಟ್ ಪುಸ್ತಕದಲ್ಲಿ ಬರೆಯಿರಿ.

## ಕಲಿಕಾ ಪ್ರವಾಸ

ನಾಲ್ಕನೇ ತರಗತಿಯ 40 ಮಕ್ಕಳು, ಮೂರು ಅಧ್ಯಾಪಕರು ಮತ್ತು ಇಬ್ಬರು ರಕ್ಷಕರು ಗೇಮ್ ಸಿಟಿ ನೋಡಲು ಹೋದರು. ಪ್ರವೇಶ ಶುಲ್ಕವು ಹಿರಿಯರಿಗೆ 100 ರೂಪಾಯಿ ಮತ್ತು ಮಕ್ಕಳಿಗೆ 50 ರೂಪಾಯಿ ಆಗಿದೆ. ಒಟ್ಟು ಎಷ್ಟು ಹಣವನ್ನು ಪ್ರವೇಶ ಶುಲ್ಕವಾಗಿ ನೀಡಬೇಕು?




| ನಾನು ಲೆಕ್ಕಮಾಡಿದ ರೀತಿ | ಸಹಪಾಠಿ ಲೆಕ್ಕಮಾಡಿದ ರೀತಿ |
|---|---|
| | |

ಗುಣಲಬ್ಧಕ್ಕೆ ಏನಾದರೂ ಪ್ರತ್ಯೇಕತೆ ಇದೆಯೇ? ನೀವು ಕಂಡುಹಿಡಿದುದನ್ನು ಬರೆಯಿರಿ.

$1 \times 96 = ....$

$2 \times 48 = ....$

$4 \times 24 = ....$

$8 \times 12 = ....$

$16 \times 6 = ....$

$32 \times 3 = ....$

**ನಾನು ಕಂಡುಹಿಡಿದದ್ದು**

## ಆವರಣ ಗೋಡೆ ನಿರ್ಮಾಣ

ಆವರಣ ಗೋಡೆ ಕಟ್ಟಲಿರುವ ಕಲ್ಲುಗಳನ್ನು ಮೈದಾನದಲ್ಲಿ ಅಟ್ಟಿ ಇಟ್ಟಿರುವುದನ್ನು ನೋಡಿರಿ. ಒಂದು ಸಾಲಲ್ಲಿ 5 ಕಲ್ಲುಗಳಂತೆ 3 ಸಾಲುಗಳಿವೆ. ಈ ರೀತಿಯ 4 ಅಟ್ಟಿ ಕಲ್ಲುಗಳಿದ್ದರೆ, ಒಟ್ಟು ಕಲ್ಲುಗಳ ಸಂಖ್ಯೆ ಎಷ್ಟು?



**ನಾನು ಲೆಕ್ಕ ಮಾಡಿದ ರೀತಿ**

## ಅಂಕೆಗಳ ಗುಣಲಬ್ಧ

123 ಎಂಬ ಸಂಖ್ಯೆಯಲ್ಲಿನ ಅಂಕೆಗಳನ್ನು ಗುಣಿಸಿ ನೋಡಿರಿ.

$1 \times 2 \times 3 = 6$

121 ಎಂಬ ಸಂಖ್ಯೆಯ ಅಂಕೆಗಳನ್ನು ಗುಣಿಸಿದರೊ?

$1 \times 2 \times 1 = 2$

ಈ ರೀತಿಯಾಗಿ ಅಂಕೆಗಳ ಗುಣಲಬ್ಧವು 2, 3, 5, 7 ಎಂಬಿವುಗಳು ಬರುವ ಮೂರಂಕೆಯ ಸಂಖ್ಯೆಗಳನ್ನು ಬರೆಯಿರಿ.

**ನಾನು ಕಂಡುಹಿಡಿದ ಸಂಖ್ಯೆಗಳು**

## ಬ್ಯಾಂಕ್‌ಗೆ...

ಮಿತ್ರಳ ಅಮ್ಮ ಹಣವನ್ನು ಹಿಂತೆಗೆಯಲು ಬ್ಯಾಂಕ್‌ಗೆ ಬಂದರು. 50 ರೂಪಾಯಿಯ 3 ಕಟ್ಟು ನೋಟುಗಳು ಲಭಿಸಿತು. ಪ್ರತಿಯೊಂದು ಕಟ್ಟಿನಲ್ಲೂ 100 ರಂತೆ ನೋಟುಗಳಿವೆ. ಹಾಗಾದರೆ ಲಭಿಸಿದ ಹಣವೆಷ್ಟು?




| ನಾನು ಲೆಕ್ಕಮಾಡಿದ ರೀತಿ | ಸಹಪಾಠಿ ಲೆಕ್ಕಮಾಡಿದ ರೀತಿ |
|---|---|
| | |

## ಗಣಿತ ಮ್ಯಾಗಜಿನ್

ಶ್ರಾವ್ಯಾಳು ಗಣಿತ ಮ್ಯಾಗಜಿನ್‌ಗೆ ತಯಾರಿಸಿದ ಸಂಖ್ಯಾ ಪಟ್ಟಿಯನ್ನು ನೋಡಿರಿ. ಇವುಗಳ ವಿಶೇಷತೆಯನ್ನು ಕಂಡುಹಿಡಿಯಿರಿ.

$1 = 1 \times 1$

$1 + 3 = 4 = 2 \times 2$

$1 + 3 + 5 = 9 = 3 \times 3$

$1 + 3 + 5 + 7 = 16 = 4 \times 4$

ಮುಂದಿನ ನಾಲ್ಕು ಸಾಲುಗಳನ್ನು ಬರೆಯಿರಿ.

..................................................

..................................................

..................................................

..................................................

ಇನ್ನು ಇವುಗಳನ್ನು ಲೆಕ್ಕ ಮಾಡುವಿರಾ?

$1 + 3 + 5 + 7 + \ldots\ldots + 19 =$

$1 + 3 + 5 + 7 + \ldots\ldots + 99 =$

$2 = 1 \times 2$

$2 + 4 = 6 = 2 \times 3$

$2 + 4 + 6 = 12 = 3 \times 4$

$2 + 4 + 6 + 8 = 20 = 4 \times 5$

ಮುಂದಿನ ನಾಲ್ಕು ಸಾಲುಗಳನ್ನು ಬರೆಯಿರಿ.

..................................................

..................................................

..................................................

..................................................

ಇನ್ನು ಇವುಗಳನ್ನು ಲೆಕ್ಕ ಮಾಡುವಿರಾ?

$2 + 4 + 6 + 8 + \ldots\ldots + 20 =$

$2 + 4 + 6 + 8 + \ldots\ldots + 100 =$

1. ಅಯನಿಮಲೆ ಶಾಲೆಗೆ ಆವರಣ ಗೋಡೆ ಕಟ್ಟಲಾಗುತ್ತಿದೆ. 3 ಮೇಸ್ತ್ರಿಗಳು ಮತ್ತು 2 ಸಹಾಯಕರು ಸೇರಿ 8 ದಿನಗಳಲ್ಲಿ ಗೋಡೆ ಕಟ್ಟಿದರು. ಮೇಸ್ತ್ರಿಯ ದಿನಗೂಲಿ 1000 ರೂಪಾಯಿ ಮತ್ತು ಸಹಾಯಕನ ದಿನಗೂಲಿ 800 ರೂಪಾಯಿ ಆಗಿದೆ. ಗೋಡೆ ಕಟ್ಟಲು ಒಟ್ಟು ಎಷ್ಟು ರೂಪಾಯಿ ಕೂಲಿ ನೀಡಲಾಯಿತು?

2. 6 ಪೆನ್ನುಗಳ ಬೆಲೆ 50 ರೂ. ಆಗಿದೆ. ಅಂತಹ 15 ಪೆನ್ನುಗಳನ್ನು ಖರೀದಿಸಲು ಎಷ್ಟು ರೂಪಾಯಿ ಬೇಕು?

3. ಸಂಖ್ಯೆಗಳನ್ನು ಗುಣಿಸಿ ಬರೆದ ಹಾಗೆ ಬಲಭಾಗದಲ್ಲಿರುವ ಖಾಲಿ ಬಿಟ್ಟಿರುವ ಉರುಟುಗಳಲ್ಲಿ ಸಂಖ್ಯೆಗಳನ್ನು ಬರೆಯಿರಿ.

| × | (2) | (6) |
|---|---|---|
| (3) | $3 \times 2 = 6$ | $3 \times 6 = 18$ |
| (5) | $5 \times 2 = 10$ | $5 \times 6 = 30$ |

| × | ◯ | (11) | ◯ | ◯ |
|---|---|---|---|---|
| ◯ | 6 | 22 | ◯ | ◯ |
| ◯ | 15 | ◯ | 40 | ◯ |
| ◯ | 18 | ◯ | ◯ | 42 |
| ◯ | ◯ | 99 | ◯ | ◯ |

4. 1, 2, 3 ಎಂಬೀ ಅಂಕೆಗಳನ್ನು ಬಳಸಿ ಅಂಕೆಗಳು ಆವರ್ತಿಸದಂತೆ ಎರಡಂಕೆ ಸಂಖ್ಯೆಗಳನ್ನು ಬರೆಯಿರಿ.

5. 1, 2, 3, 4 ಎಂಬೀ ಅಂಕೆಗಳನ್ನು ಬಳಸಿ ಅಂಕೆಗಳು ಆವರ್ತಿಸದಂತೆ ಎರಡಂಕೆ ಸಂಖ್ಯೆಗಳನ್ನು ಬರೆಯಿರಿ.

**ಅನ್ವೇಷಣೆ**

- ಯಾವುದಾದರೂ ಒಂದು ಸಂಖ್ಯೆಯನ್ನು 9 ರಿಂದ ಗುಣಿಸಿರಿ. ಗುಣಲಬ್ಧವಾಗಿ ಸಿಗುವ ಸಂಖ್ಯೆಯ ಅಂಕೆಗಳನ್ನು ಕೂಡಿಸಿರಿ. ಕೂಡಿಸಿ ಲಭಿಸುವ ಸಂಖ್ಯೆಯಲ್ಲಿ ಒಂದಕ್ಕಿಂತ ಹೆಚ್ಚು ಅಂಕೆಗಳಿದ್ದರೆ ಅವುಗಳನ್ನು ಪುನಃ ಕೂಡಿಸಿರಿ. ಹೀಗೆ ಒಂದಂಕೆ ಸಿಗುವವರೆಗೆ ಕೂಡಿಸಿರಿ. ಏನು ಲಭಿಸಿತು? ಈ ರೀತಿಯಲ್ಲಿ ಇತರ ಸಂಖ್ಯೆಗಳನ್ನು 9 ರಿಂದ ಗುಣಿಸಿ ಕ್ರಿಯೆ ಮಾಡಿ ನೋಡಿರಿ.

# 8

# ಹೀಗೆ ಅಳೆಯುವ



## ಗಣಿತದ ಆಟ

ಕಲಿಕೋತ್ಸವದಲ್ಲಿ ಮಕ್ಕಳು ಹಲವು ವಸ್ತುಗಳ ಉದ್ದವನ್ನು ಕಂಡುಹಿಡಿದರು.

ಪಟ್ಟಿಯನ್ನು ನೋಡಿರಿ... ವಸ್ತುಗಳ ಉದ್ದವನ್ನು ಕಂಡುಹಿಡಿಯಿರಿ.

| ವಸ್ತುಗಳು | | ಊಹಿಸಿದ ಉದ್ದ (ಸೆಂಟಿಮೀಟರ್‌ನಲ್ಲಿ) | ಅಳೆದಾಗ ಲಭಿಸಿದ ಉದ್ದ (ಸೆಂಟಿಮೀಟರ್‌ನಲ್ಲಿ) |
|---|---|---|---|
| ಪೆನ್ನು | | | |
| ಪೆನ್ಸಿಲ್ | | | |
| ನೋಟ್ ಪುಸ್ತಕ | ಬದಿ 1 | | |
| | ಬದಿ 2 | | |
| A4 ಪೇಪರ್ | ಬದಿ 1 | | |
| | ಬದಿ 2 | | |




ವಸ್ತುಗಳ ಉದ್ದವನ್ನು ಅಳೆದಾಗ ಎಲ್ಲಾ ಉದ್ದವನ್ನು ನಿಖರವಾಗಿ ಅಳೆಯಲು ಸಾಧ್ಯವಾಯಿತೇ?









## ನಿಖರವಾಗಿ ಅಳೆಯುವ

ಚಿತ್ರದಲ್ಲಿರುವ ಪೆನ್ಸಿಲಿನ ಉದ್ದ ಎಷ್ಟು?




13 ಸೆಂಟಿಮೀಟರ್ ಮತ್ತು 14 ಸೆಂಟಿಮೀಟರ್‌ನ ಎಡೆಯಲ್ಲಿರುವುದು ಅಲ್ಲವೇ?

ಸಮೀಪದ ಸೆಂಟಿಮೀಟರ್ ಗೆರೆಗಳ ಎಡೆಯಲ್ಲಿ 9 ಸಣ್ಣ ಗೆರೆಗಳಿವೆ. 10 ಸಣ್ಣ ಅಂತರಗಳಿವೆ. ಪೆನ್ಸಿಲ್‌ನ ಮೊನೆಯು 13 ಸೆಂಟಿಮೀಟರ್ ದಾಟಿ 5ನೇ ಸಣ್ಣ ಗೆರೆಯಲ್ಲಿದೆ.



ಎರಡು ಸಣ್ಣ ಗೆರೆಗಳ ಎಡೆಯಲ್ಲಿರುವ ಅಂತರವು 1 ಮಿಲ್ಲಿಮೀಟರ್ ಆಗಿದೆ.



ಹಾಗಾದರೆ ಪೆನ್ಸಿಲ್‌ನ ಉದ್ದವು 13 ಸೆಂಟಿಮೀಟರ್ 5 ಮಿಲ್ಲಿಮೀಟರ್ ಆಗಿದೆ.

10 ಮಿಲ್ಲಿಮೀಟರ್ ಅಂದರೆ ಒಂದು ಸೆಂಟಿಮೀಟರ್.

- ನಿಮ್ಮ ಗಣಿತ ಪಾಠ ಪುಸ್ತಕದ ಬದಿಗಳ ಉದ್ದವನ್ನು ಅಳೆದು ಬರೆಯಿರಿ.

| ದೊಡ್ಡ ಬದಿ | ಸಣ್ಣ ಬದಿ |
|---|---|
| ........................ | ........................ |

- ನಿಮ್ಮ ಸ್ಕೇಲ್‌ನ ಉದ್ದವನ್ನು ಅಳೆದು ಬರೆಯಿರಿ.

| ದೊಡ್ಡ ಬದಿ | ಸಣ್ಣ ಬದಿ |
|---|---|
| ........................ | ........................ |

- ನಿಮ್ಮ ನೋಟ್ ಪುಸ್ತಕದಲ್ಲಿ ಸ್ಕೇಲ್ ಉಪಯೋಗಿಸಿ ಒಂದು ಗೆರೆ ಎಳೆಯಿರಿ. ಉದ್ದವನ್ನು ಅಳೆದು ಬರೆಯಿರಿ.

........................

## ಉದ್ದ ಎಷ್ಟು?

ಪೆನ್ಸಿಲ್‌ನ ಉದ್ದ ಬರೆಯಿರಿ.




............ ಸೆಂಟಿಮೀಟರ್ ............ ಮಿಲ್ಲಿಮೀಟರ್




............ ಸೆಂಟಿಮೀಟರ್ ............ ಮಿಲ್ಲಿಮೀಟರ್




............ ಸೆಂಟಿಮೀಟರ್ ............ ಮಿಲ್ಲಿಮೀಟರ್




............ ಸೆಂಟಿಮೀಟರ್ ............ ಮಿಲ್ಲಿಮೀಟರ್




............ ಸೆಂಟಿಮೀಟರ್ ............ ಮಿಲ್ಲಿಮೀಟರ್

## ಪೇಪರ್ ಸ್ಟ್ರಿಪ್

ಕೆಳಗೆ ಕೊಟ್ಟಿರುವ ಪೇಪರ್ ಸ್ಟ್ರಿಪ್‌ಗಳ ಉದ್ದವನ್ನು ಸ್ಕೇಲ್ ಉಪಯೋಗಿಸಿ ಅಳೆದು ಬರೆಯಿರಿ.



............ ಸೆಂಟಿಮೀಟರ್ ............ ಮಿಲ್ಲಿಮೀಟರ್



............ ಸೆಂಟಿಮೀಟರ್ ............ ಮಿಲ್ಲಿಮೀಟರ್



............ ಸೆಂಟಿಮೀಟರ್ ............ ಮಿಲ್ಲಿಮೀಟರ್



............ ಸೆಂಟಿಮೀಟರ್ ............ ಮಿಲ್ಲಿಮೀಟರ್

## ಪುನಃ ಅಳೆದಾಗ

ಗಣಿತದ ಆಟದ ವಸ್ತುಗಳ ಉದ್ದವನ್ನು ಇನ್ನೊಮ್ಮೆ ಅಳೆದು ನೋಡಿರಿ. ನಿಖರವಾದ ಅಳತೆಯನ್ನು ಪಟ್ಟಿಯಲ್ಲಿ ಬರೆಯಿರಿ.

| ವಸ್ತುಗಳು | | ಮೊದಲು ಬರೆದ ಉದ್ದ ಸೆಂಟಿಮೀಟರ್‌ನಲ್ಲಿ | ನಿಖರವಾದ ಉದ್ದ ಸೆಂಟಿಮೀಟರ್ ಮತ್ತು ಮಿಲ್ಲಿಮೀಟರ್‌ನಲ್ಲಿ |
|---|---|---|---|
| ಪೆನ್ನು | | | |
| ಪೆನ್ಸಿಲ್ | | | |
| ನೋಟ್ ಪುಸ್ತಕ | ಬದಿ 1 | | |
| | ಬದಿ 2 | | |
| A4 ಪೇಪರ್ | ಬದಿ 1 | | |
| | ಬದಿ 2 | | |

## ಅಳೆಯಿರಿ... ಕಂಡುಹಿಡಿಯಿರಿ...



- ಗೆರೆಯ ಎಡ ತುದಿಯಿಂದ ಆರಂಭಿಸಿ ಗುರುತು ಮಾಡಿದ ಭಾಗದವರೆಗೆ ಇರುವ ದೂರವೆಷ್ಟು? ಅಳೆದು ಬರೆಯಿರಿ.
- ಗೆರೆಯ ಗುರುತು ಮಾಡಿದ ಭಾಗದಿಂದ ಆರಂಭಿಸಿ ಬಲ ತುದಿಯವರೆಗೆ ಇರುವ ದೂರವೆಷ್ಟು?
- ಗೆರೆಯ ಒಟ್ಟು ಉದ್ದವೆಷ್ಟು?

**ನಾನು ಲೆಕ್ಕ ಮಾಡಿದ ರೀತಿ**

## ಪಟ್ಟಿ ಪೂರ್ತಿಗೊಳಿಸಿರಿ.

| ಮಿಲ್ಲಿಮೀಟರ್ | ಸೆಂಟಿಮೀಟರ್ | ಮಿಲ್ಲಿಮೀಟರ್ | ಸೆಂಟಿಮೀಟರ್ |
|---|---|---|---|
| 10 | 1 | 70 | |
| 20 | 2 | | 9 |
| | 4 | 100 | |

## ಪೆನ್ಸಿಲ್‌ನ ಉದ್ದ



ನನ್ನ ಪೆನ್ಸಿಲ್‌ನ ಉದ್ದ 5 ಸೆಂಟಿಮೀಟರ್ ಮತ್ತು 7 ಮಿಲ್ಲಿಮೀಟರ್ ಆಗಿದೆ.



57 ಮಿಲ್ಲಿಮೀಟರ್ ಎಂದೂ ಹೇಳಬಹುದು.

5 ಸೆಂಟಿಮೀಟರ್ = 50 ಮಿಲ್ಲಿಮೀಟರ್

ನಿಮ್ಮ ಮತ್ತು ಗೆಳೆಯರ ಪೆನ್ಸಿಲ್‌ನ ಉದ್ದವನ್ನು ಅಳೆದು ಪಟ್ಟಿಯಲ್ಲಿ ಬರೆಯಿರಿ.

| ಹೆಸರು | ಪೆನ್ಸಿಲ್‌ನ ಉದ್ದ ಊಹೆ | ಪೆನ್ಸಿಲಿನ ಉದ್ದ ಸರಿಯಾದ ಅಳತೆ |
|---|---|---|
| | | |
| | | |
| | | |

## ಕಂಡುಹಿಡಿದು ಬರೆಯುವ.

| | | |
|---|---|---|
| 1 ಸೆಂಟಿಮೀಟರ್ 8 ಮಿಲ್ಲಿಮೀಟರ್ | 10 ಮಿಲ್ಲಿಮೀಟರ್ + 8 ಮಿಲ್ಲಿಮೀಟರ್ | 18 ಮಿಲ್ಲಿಮೀಟರ್ |
| 5 ಸೆಂಟಿಮೀಟರ್ 8 ಮಿಲ್ಲಿಮೀಟರ್ | ............................... | .................... |
| ............................... | ............................... | 24 ಮಿಲ್ಲಿಮೀಟರ್ |
| ............................... | 30 ಮಿಲ್ಲಿಮೀಟರ್ + 6 ಮಿಲ್ಲಿಮೀಟರ್ | .................... |

## ಸಣ್ಣ ಉದ್ದ

ಒಂದು ಸೆಂಟಿಮೀಟರ್‌ಗಿಂತಲೂ ಕಡಿಮೆ ಉದ್ದವಿರುವ ವಸ್ತುಗಳು ಯಾವುವು?




- ಸ್ಕ್ರೂ
-
-
-

## ಪಟ್ಟಿ ಪೂರ್ತಿಗೊಳಿಸಿರಿ

ಸಾನುವಿನ ಗೆಳೆಯರು ಕಲಿಕೋತ್ಸವದ ಕೆಲವು ವಸ್ತುಗಳ ಒಟ್ಟು ಉದ್ದವನ್ನು ಕಂಡುಹಿಡಿಯುತ್ತಿದ್ದಾರೆ. ಪಟ್ಟಿಯನ್ನು ಪೂರ್ತಿಗೊಳಿಸಲು ಸಹಾಯ ಮಾಡಿರಿ.

| ಹೆಸರು | ವಸ್ತು | ಸೆಂಟಿಮೀಟರ್‌ನಲ್ಲಿ ಮತ್ತು ಮಿಲ್ಲಿಮೀಟರ್‌ನಲ್ಲಿ | ಮಿಲ್ಲಿಮೀಟರ್‌ನಲ್ಲಿ |
|---|---|---|---|
| ರಾಣಿ, ಚಿನ್ನು | ರಿಬ್ಬನ್ | 16 ಸೆಂಟಿಮೀಟರ್ 5 ಮಿಲ್ಲಿಮೀಟರ್ | |
| ಟಿನು, ಅಪ್ಪು | ಸೆಣಬಿನ ನೂಲು | | 256 ಮಿಲ್ಲಿಮೀಟರ್ |
| ಮನು, ಕನಿ | ಬಣ್ಣದ ಕಾಗದ | 24 ಸೆಂಟಿಮೀಟರ್ | |
| ಸಾಕ್ಷಿ, ಶ್ರೇಯ | ದಪ್ಪವಾದ ನೂಲು | | 140 ಮಿಲ್ಲಿಮೀಟರ್ |

## ಮಡಲಕಡ್ಡಿ ಆಯತ

ಟಿನು ಮಡಲಕಡ್ಡಿ ಉಪಯೋಗಿಸಿ 9 ಸೆಂಟಿಮೀಟರ್ 5 ಮಿಲ್ಲಿಮೀಟರ್ ಬದಿ ಇರುವ ಒಂದು ಚೌಕವನ್ನು ರಚಿಸುತ್ತಿದ್ದಾಳೆ. ಇದಕ್ಕಾಗಿ ತುಂಡರಿಸಿ ತೆಗೆದ ಮಡಲಕಡ್ಡಿಗಳ ಒಟ್ಟು ಉದ್ದವೆಷ್ಟು?

ಒಂದು ಮಡಲ ಕಡ್ಡಿಯ ಉದ್ದ 9 ಸೆಂಟಿಮೀಟರ್ 5 ಮಿಲ್ಲಿಮೀಟರ್ ಆಗಿದೆಯಲ್ಲವೇ?

4 ಮಡಲ ಕಡ್ಡಿಯ ಉದ್ದ ಎಷ್ಟು?

$4 \times 9 = 36$ ಸೆಂಟಿಮೀಟರ್ $4 \times 5 = 20$ ಮಿಲ್ಲಿಮೀಟರ್

20 ಮಿಲ್ಲಿಮೀಟರ್ ಎಂದರೆ ಎಷ್ಟು ಸೆಂಟಿಮೀಟರ್? ............

9 ಸೆಂಟಿಮೀಟರ್, 5 ಮಿಲ್ಲಿಮೀಟರ್ ಉದ್ದವಿರುವ 4 ಮಡಲ ಕಡ್ಡಿಗಳ ಉದ್ದ

= 36 ಸೆಂಟಿಮೀಟರ್ + 2 ಸೆಂಟಿಮೀಟರ್ = .............. ಸೆಂಟಿಮೀಟರ್

ಹೀಗೆಯೂ ಬರೆಯಬಹುದು.

ಒಂದು ಮಡಲ ಕಡ್ಡಿಯ ಉದ್ದ = 9 ಸೆಂಟಿಮೀಟರ್ 5 ಮಿಲ್ಲಿಮೀಟರ್

4 ಮಡಲ ಕಡ್ಡಿಗಳ ಉದ್ದ = 4 × ( 9 ಸೆಂಟಿಮೀಟರ್ + 5 ಮಿಲ್ಲಿಮೀಟರ್)

= 4 × 95 ಮಿಲ್ಲಿಮೀಟರ್

= .......... ಮಿಲ್ಲಿಮೀಟರ್

= ..........ಸೆಂಟಿಮೀಟರ್

## ಮಡಲಕಡ್ಡಿಯ ಒಟ್ಟು ಉದ್ದ

ಸಾಕ್ಷಿಯು 4 ಮಡಲಕಡ್ಡಿಗಳನ್ನು ಉಪಯೋಗಿಸಿ ಆಯತ ನಿರ್ಮಿಸುತ್ತಿದ್ದಾಳೆ. ಎರಡು ಕಡ್ಡಿಗಳ ಒಟ್ಟು ಉದ್ದ 20 ಸೆಂಟಿಮೀಟರ್ 4 ಮಿಲ್ಲಿಮೀಟರ್ ಆಗಿದೆ. ಇತರ ಎರಡು ಕಡ್ಡಿಗಳ ಒಟ್ಟು ಉದ್ದ 16 ಸೆಂಟಿಮೀಟರ್ 6 ಮಿಲ್ಲಿಮೀಟರ್ ಆಗಿರುವುದು. ಮಡಲಕಡ್ಡಿಗಳ ಒಟ್ಟು ಉದ್ದವೆಷ್ಟು?

ಸಾಕ್ಷಿಗೆ ಉದ್ದವನ್ನು ಅಳೆಯಲು ಸಹಾಯ ಮಾಡಿರಿ. ಲೆಕ್ಕ ಮಾಡಿದ ರೀತಿಯನ್ನು ಬರೆಯಿರಿ.

**ನಾನು ಲೆಕ್ಕ ಮಾಡಿದ ರೀತಿ**

## ಒಟ್ಟು ಉದ್ದ

ಒಂದು ಪೆನ್ಸಿಲ್‌ನ ಉದ್ದ 7 ಸೆಂಟಿಮೀಟರ್ 8 ಮಿಲ್ಲಿಮೀಟರ್ ಆಗಿದೆ. ಮತ್ತೊಂದು ಪೆನ್ಸಿಲಿನ ಉದ್ದ 5 ಸೆಂಟಿ ಮೀಟರ್ 3 ಮಿಲ್ಲಿಮೀಟರ್ ಆಗಿದೆ. ಎರಡು ಪೆನ್ಸಿಲ್‌ಗಳ ಒಟ್ಟು ಉದ್ದವೆಷ್ಟು?







13 ಸೆಂಟಿಮೀಟರ್ 1 ಮಿಲ್ಲಿಮೀಟರ್ = 131 ಮಿಲ್ಲಿಮೀಟರ್

**ರೀತಿ : 1**

7 ಸೆಂಟಿಮೀಟರ್ 8 ಮಿಲ್ಲಿಮೀಟರ್ +
5 ಸೆಂಟಿಮೀಟರ್ 3 ಮಿಲ್ಲಿಮೀಟರ್
= 12 ಸೆ ಮೀ 11 ಮಿ ಮೀ
= 12 ಸೆ ಮೀ 1 ಸೆ ಮೀ 1 ಮಿ ಮೀ
= 13 ಸೆ ಮೀ 1 ಮಿ ಮೀ

**ರೀತಿ : 2**

7 ಸೆಂಟಿಮೀಟರ್ 8 ಮಿಲ್ಲಿಮೀಟರ್
= 78 ಮಿಲ್ಲಿಮೀಟರ್

5 ಸೆ ಮೀ 3 ಮಿ ಮೀ
= 53 ಮಿ ಮೀ

78 ಮಿ ಮೀ + 53 ಮಿ ಮೀ
= 131 ಮಿ ಮೀ

ಸೆಂಟಿಮೀಟರ್ ಅಳತೆಯನ್ನು ಸೆ ಮೀ ಎಂದೂ
ಮಿಲ್ಲಿಮೀಟರ್ ಅಳತೆಯನ್ನು ಮಿ ಮೀ ಎಂದೂ ಬರೆಯಬಹುದು.

## ತುಂಡಾಗಿರುವ ಸ್ಕೇಲ್




ಉಳಿದ ಭಾಗದ ಉದ್ದವನ್ನು ಹೇಗೆ ಕಂಡುಹಿಡಿಯಬಹುದು?

**ರೀತಿ : 1**

15 ಸೆಂಟಿಮೀಟರ್ – 8 ಸೆಂಟಿಮೀಟರ್ 4 ಮಿಲ್ಲಿಮೀಟರ್

= 14 ಸೆಂಟಿಮೀಟರ್ 1 ಸೆಂಟಿಮೀಟರ್ – 8 ಸೆಂಟಿಮೀಟರ್ 4 ಮಿಲ್ಲಿಮೀಟರ್

= 14 ಸೆಂಟಿಮೀಟರ್ 10 ಮಿಲ್ಲಿಮೀಟರ್ – 8 ಸೆಂಟಿಮೀಟರ್ 4 ಮಿಲ್ಲಿಮೀಟರ್




| | |
|---|---|
| 14 ಸೆಂಟಿಮೀಟರ್ | 10 ಮಿಲ್ಲಿಮೀಟರ್ – |
| 8 ಸೆಂಟಿಮೀಟರ್ | 4 ಮಿಲ್ಲಿಮೀಟರ್ |
| 6 ಸೆಂಟಿಮೀಟರ್ | 6 ಮಿಲ್ಲಿಮೀಟರ್ |

**ರೀತಿ : 2**

15 ಸೆಂಟಿಮೀಟರ್ – 8 ಸೆಂಟಿಮೀಟರ್ 4 ಮಿಲ್ಲಿಮೀಟರ್

= 150 ಮಿಲ್ಲಿಮೀಟರ್ – 84 ಮಿಲ್ಲಿಮೀಟರ್

= 66 ಮಿಲ್ಲಿಮೀಟರ್

= 6 ಸೆಂಟಿಮೀಟರ್ 6 ಮಿಲ್ಲಿಮೀಟರ್

## ಶಾಲಾ ಕ್ರೀಡಾಕೂಟ




ಚಿನ್ನು ಜಿಗಿದ ದೂರವನ್ನು ನೋಡಿರಿ.

| ಜಿಗಿತ | ದೂರ |
|---|---|
| 1 | 1 ಮೀ 96 ಸೆ ಮೀ |
| 2 | 2 ಮೀ 17 ಸೆ ಮೀ |
| 3 | 2 ಮೀ 46 ಸೆ ಮೀ |

ಚಿನ್ನು ಜಿಗಿದುದರಲ್ಲಿ ಅತಿ ಹೆಚ್ಚು ದೂರ ಎಷ್ಟು?




1 ಮೀಟರ್ = 100 ಸೆ ಮೀ

- ಮೊದಲನೇ ಜಿಗಿತಕ್ಕಿಂತ ಮೂರನೇ ಜಿಗಿತದ ದೂರವು ಎಷ್ಟು ಹೆಚ್ಚಾಗಿದೆ?

- ಎರಡನೇ ಜಿಗಿತಕ್ಕಿಂತ ಮೂರನೇ ಜಿಗಿತದ ದೂರವು ಎಷ್ಟು ಹೆಚ್ಚಾಗಿದೆ?

## ಓಟ ಸ್ಪರ್ಧೆ




- 3000 ಮೀಟರ್ ಪೂರ್ತಿಯಾಗಲು ಚಿನ್ನುವಿನ ಅಣ್ಣನು ಇನ್ನು ಎಷ್ಟು ದೂರ ಓಡಬೇಕು?




- 3000 ಮೀಟರ್ ಎಂದರೆ ಎಷ್ಟು ಕಿಲೋಮೀಟರ್ ಆಗಿದೆ?

| | |
|---|---|
| ಒಂದು ಮೀಟರ್ | = 100 ಸೆಂಟಿಮೀಟರ್ |
| ಅರ್ಧ ಮೀಟರ್ | = 50 ಸೆಂಟಿಮೀಟರ್ |
| ಕಾಲು ಮೀಟರ್ | = 25 ಸೆಂಟಿಮೀಟರ್ |
| ಮುಕ್ಕಾಲು ಮೀಟರ್ | = 75 ಸೆಂಟಿಮೀಟರ್ |

| | |
|---|---|
| ಒಂದು ಕಿಲೋಮೀಟರ್ | = 1000 ಮೀಟರ್ |
| ಅರ್ಧ ಕಿಲೋಮೀಟರ್ | = 500 ಮೀಟರ್ |
| ಕಾಲು ಕಿಲೋಮೀಟರ್ | = 250 ಮೀಟರ್ |
| ಮುಕ್ಕಾಲು ಕಿಲೋಮೀಟರ್ | = 750 ಮೀಟರ್ |

**ಉದ್ದ ಬರೆಯಿರಿ**

| | |
|---|---|
| ಒಂದುವರೆ ಮೀಟರ್ = .................... ಸೆ ಮೀ | ಆರುವರೆ ಮೀಟರ್ = .................... ಸೆ ಮೀ |
| ಐದು ಮುಕ್ಕಾಲು ಮೀಟರ್ = .................... ಸೆ ಮೀ | ಎರಡುಕಾಲು ಮೀಟರ್ = .................... ಸೆ ಮೀ |

## ಶಾಲೆಗೆ...

ಕಲಿಕೋತ್ಸವದ ಬಳಿಕ ಚಿನ್ನು ತನ್ನ ತಂದೆಯೊಂದಿಗೆ ಮನೆಗೆ ಹೋದಳು.




- ಚಿನ್ನುವಿನ ಶಾಲೆಯಿಂದ ಮನೆಗಿರುವ ದೂರವನ್ನು ಮೀಟರ್‌ನಲ್ಲಿ ಬರೆಯಿರಿ.

ಚಿನ್ನುವಿನ ಗೆಳೆಯರ ಮನೆ ಮತ್ತು ಶಾಲೆಯ ನಡುವಿನ ದೂರವನ್ನು ಬರೆದಿರುವುದನ್ನು ನೋಡಿರಿ. ಬಿಟ್ಟು ಹೋದ ಅಳತೆಗಳನ್ನು ಬರೆಯಿರಿ.

| ಹೆಸರು | ದೂರ ಮೀಟರ್‌ನಲ್ಲಿ | ದೂರ ಕಿಲೋಮೀಟರ್ ಮತ್ತು ಮೀಟರ್‌ನಲ್ಲಿ |
|---|---|---|
| ಮನು | 2500 ಮೀಟರ್ | 2 ಕಿಲೋಮೀಟರ್ 500 ಮೀಟರ್ |
| ಆರತಿ | 5245 ಮೀಟರ್ | |
| ಸಿಯ | | 3 ಕಿಲೋಮೀಟರ್ 800 ಮೀಟರ್ |
| ಆಲ್‌ಬಿನ್ | | ನಾಲ್ಕುವರೆ ಕಿಲೋಮೀಟರ್ |

## ಸೈಕಲ್ ಯಾತ್ರೆ

ಮನು ಸೈಕಲಿನಲ್ಲಿ ಶಾಲೆಗೆ ಹೋಗುವನು. ಪ್ರತಿದಿನ ಶಾಲೆಗೆ ತಲುಪಲು ಮತ್ತು ಮನೆಗೆ ವಾಪಸಾಗಲು ಸಂಚರಿಸುವ ದೂರ ಎಷ್ಟು? ಪಟ್ಟಿ ನೋಡಿ ಕಂಡುಹಿಡಿಯಿರಿ.



**ರೀತಿ : 1**

2500 ಮೀಟರ್ + 2500 ಮೀಟರ್ = 5000 ಮೀಟರ್

= 5 ಕಿಲೋಮೀಟರ್

**ರೀತಿ : 2**

ಎರಡುವರೆ ಕಿಲೋಮೀಟರ್ + ಎರಡುವರೆ ಕಿಲೋಮೀಟರ್

2 ಕಿಲೋಮೀಟರ್ 500 ಮೀಟರ್ +

2 ಕಿಲೋಮೀಟರ್ 500 ಮೀಟರ್

= 4 ಕಿಲೋಮೀಟರ್ + 1000 ಮೀಟರ್

= 4 ಕಿಲೋಮೀಟರ್ + 1 ಕಿಲೋಮೀಟರ್

= 5 ಕಿಲೋಮೀಟರ್

2500 ಮೀಟರ್ ಎಂಬುದು ಎರಡೂವರೆ ಕಿಲೋಮೀಟರ್ ಆಗಿದೆ.

ಮೀಟರನ್ನು 'ಮೀ' ಎಂದೂ ಕಿಲೋಮೀಟರನ್ನು 'ಕಿ ಮೀ' ಎಂದೂ ಸಂಕ್ಷಿಪ್ತವಾಗಿ ಬರೆಯುವರು.

- ಸಿಯ ಶಾಲೆಗೆ ತೆರಳಿ ಮನೆಗೆ ತಲುಪುವವರೆಗೆ ಒಟ್ಟು ಎಷ್ಟು ದೂರ ಸಂಚರಿಸಿದಳು? ಪಟ್ಟಿ ನೋಡಿ ಲೆಕ್ಕ ಮಾಡಿರಿ.




**ಹೀಗೆಯೂ ಹೇಳಬಹುದು**

- ಮೂರುಕಾಲು ಕಿಲೋಮೀಟರ್ = 3 ಕಿ ಮೀ, 250 ಮೀ
- ನಾಲ್ಕುವರೆ ಕಿಲೋಮೀಟರ್ = 4 ಕಿ ಮೀ, 500 ಮೀ
- ಐದು ಮುಕ್ಕಾಲು ಕಿಲೋಮೀಟರ್ = 5 ಕಿ ಮೀ, 750 ಮೀ

## ಕಲಿಕಾ ಪ್ರವಾಸ

- ಚಿನ್ನು ಮತ್ತು ಗೆಳೆಯರು ಶಾಲೆಯಿಂದ ಮೃಗಾಲಯಕ್ಕೆ ಕಲಿಕಾ ಪ್ರವಾಸ ಕೈಗೊಂಡರು.







- ಚಿನ್ನು ಮತ್ತು ಗೆಳೆಯರು ಮೃಗಾಲಯಕ್ಕೆ ತಲುಪಲು ಇನ್ನು ಎಷ್ಟು ದೂರ ಸಂಚರಿಸಬೇಕು?

**ನಾನು ಲೆಕ್ಕ ಮಾಡಿದ ರೀತಿ**




- ಪಾರ್ಕ್‌ಗೆ ಹೋಗುವ ದಾರಿಯಲ್ಲಿ ಮೃಗಾಲಯ ಇರುವುದು. ಶಾಲೆಯಿಂದ ಪಾರ್ಕ್‌ಗೆ ಇರುವ ದೂರ 30 ಕಿಲೋಮೀಟರ್ ಆಗಿದೆ. ಮೃಗಾಲಯದಿಂದ ಪಾರ್ಕ್‌ಗೆ ತಲುಪಲು ಎಷ್ಟು ದೂರ ಸಂಚರಿಸಬೇಕು?

## ಕೆ - ಫೋನ್

ಚೀಲಿಕ್ಕೋಡ್ ಪಂಚಾಯತ್‌ನ 3 ಶಾಲೆಗಳಿಗೆ ಕೆ ಫೋನ್ ಕನೆಕ್ಷನ್ ಕೊಡಲಾಗುವುದು. 20 ಕಿಲೋಮೀಟರ್ ದೂರ ಕೇಬಲ್ ಎಳೆಯಬೇಕು. ಪೊನ್ನುಮಲೆ ಶಾಲೆಯಿಂದ ಮಿನ್ನಿಯಾಡ್ ಶಾಲೆಗೆ 12 ಕಿಲೋಮೀಟರ್ 673 ಮೀಟರ್ ದೂರ ಕೇಬಲ್ ಎಳೆಯಲಾಯಿತು. ಮೂರನೆಯ ಶಾಲೆಗೆ ಕನೆಕ್ಷನ್ ಪೂರ್ತಿಗೊಳಿಸಲು ಇನ್ನು ಎಷ್ಟು ದೂರ ಕೇಬಲ್ ಎಳೆಯಬೇಕು?




ಪೊನ್ನುಮಲೆ ಶಾಲೆಯಿಂದ ಮಿನ್ನಿಯಾಡ್ ಶಾಲೆಗೆ 12 ಕಿಲೋಮೀಟರ್ 673 ಮೀಟರ್ ದೂರವಿದೆ.

ಮೂರನೆಯ ಶಾಲೆಗೆ ಕನೆಕ್ಷನ್ ಕೊಡಲು ಕೇಬಲ್ ಎಳೆಯಬೇಕಾದ ದೂರವನ್ನು ಕಂಡುಹಿಡಿಯುವುದು ಹೇಗೆ?

**ರೀತಿ 1**

20 ಕಿಲೋಮೀಟರ್ − 12 ಕಿಲೋಮೀಟರ್ 673 ಮೀಟರ್

20 ಕಿಲೋಮೀಟರ್ = 19 ಕಿಲೋಮೀಟರ್ 1 ಕಿಲೋಮೀಟರ್

19 ಕಿಲೋಮೀಟರ್ 1 ಕಿಲೋಮೀಟರ್ − 12 ಕಿಲೋಮೀಟರ್ 673 ಮೀಟರ್

19 ಕಿಲೋಮೀಟರ್ − 12 ಕಿಲೋಮೀಟರ್ = 7 ಕಿಲೋಮೀಟರ್

1 ಕಿಲೋಮೀಟರ್ − 673 ಮೀಟರ್ = 1000 ಮೀಟರ್ − 673 ಮೀಟರ್

= 327 ಮೀಟರ್

20 ಕಿಲೋಮೀಟರ್ − 12 ಕಿಲೋಮೀಟರ್ 673 ಮೀಟರ್

= 7 ಕಿಲೋಮೀಟರ್ 327 ಮೀಟರ್

**ರೀತಿ 2**

20 ಕಿಲೋಮೀಟರ್ − 12 ಕಿಲೋಮೀಟರ್ 673 ಮೀಟರ್

20 ಕಿಲೋಮೀಟರ್ = 20000 ಮೀಟರ್

12 ಕಿಲೋಮೀಟರ್ 673 ಮೀ = 12000 ಮೀಟರ್ + 673 ಮೀಟರ್

= 12673 ಮೀಟರ್

20 ಕಿಲೋಮೀಟರ್ − 12 ಕಿಲೋಮೀಟರ್ 673 ಮೀಟರ್

= 20000 ಮೀಟರ್ − 12673 ಮೀಟರ್

= 7327 ಮೀಟರ್

= 7 ಕಿಲೋಮೀಟರ್ 327 ಮೀಟರ್

## ರಸ್ತೆ ಡಾಮರೀಕರಣ

ಆರತಿಯ ಮನೆಯ ಮುಂಭಾಗದಲ್ಲಿರುವ ರಸ್ತೆಗೆ ಡಾಮರೀಕರಣ ಮಾಡಲಾಗುತ್ತಿದೆ. 9 ಕಿಲೋಮೀಟರ್ 825 ಮೀಟರ್ ಡಾಮರೀಕರಣ ಮಾಡಬೇಕು. ಮೊದಲ ದಿನ 4 ಕಿಲೋಮೀಟರ್ 300 ಮೀಟರ್ ಡಾಮರು ಹಾಕಲಾಯಿತು. ಡಾಮರು ಹಾಕಲು ಬಾಕಿಯಿರುವ ದೂರವೆಷ್ಟು?

**ರೀತಿ 1**

9 ಕಿಲೋಮೀಟರ್ 825 ಮೀಟರ್ – 4 ಕಿಲೋಮೀಟರ್ 300 ಮೀಟರ್

9825 ಮೀಟರ್ – 4300 ಮೀಟರ್

9000 ಮೀಟರ್ – 4000 ಮೀಟರ್ = 5000 ಮೀಟರ್

825 ಮೀಟರ್ – 300 ಮೀಟರ್ = 525 ಮೀಟರ್

5000 ಮೀಟರ್ + 525 ಮೀಟರ್ = 5525 ಮೀಟರ್

= 5 ಕಿಲೋಮೀಟರ್ 525 ಮೀಟರ್

**ರೀತಿ 2**

9 ಕಿಲೋಮೀಟರ್ 825 ಮೀಟರ್ – 4 ಕಿಲೋಮೀಟರ್ 300 ಮೀಟರ್

9 ಕಿಲೋಮೀಟರ್ – 4 ಕಿಲೋಮೀಟರ್ = 5 ಕಿಲೋಮೀಟರ್

825 ಮೀಟರ್ – 300 ಮೀಟರ್ = 525 ಮೀಟರ್

9 ಕಿಲೋಮೀಟರ್ 825 ಮೀ – 4 ಕಿಲೋಮೀಟರ್ 300 ಮೀಟರ್

= 5 ಕಿಲೋಮೀಟರ್ 525 ಮೀಟರ್

1. ಕಲಿಕೋತ್ಸವಕ್ಕಾಗಿ ರಕ್ಷಕರನ್ನು ಆಹ್ವಾನಿಸಲು ಆಮಂತ್ರಣ ಪತ್ರಿಕೆಯನ್ನು ತಯಾರಿಸುತ್ತಿದ್ದಾರೆ. ಲಿನಿಗೆ ಸಿಕ್ಕಿದ ಆಯತಾಕಾರದ ಕಾಗದದ ಬದಿಗಳ ಉದ್ದವು 16 ಸೆಂಟಿಮೀಟರ್ 8 ಮಿಲ್ಲಿಮೀಟರ್ ಮತ್ತು 9 ಸೆಂಟಿಮೀಟರ್ 2 ಮಿಲ್ಲಿಮೀಟರ್ ಆಗಿದೆ. ಕಾರ್ಡಿನ ಬದಿಗಳ ಸುತ್ತಲೂ ಬಣ್ಣದ ಪೇಪರ್ ಅಂಟಿಸಿ ಅಂದಗೊಳಿಸಲು ಅಗತ್ಯವಿರುವ ಕಾಗದದ ಉದ್ದವೆಷ್ಟು?
2. ಚಿನ್ನುವಿನ ಪಂಚಾಯತ್‌ನಲ್ಲಿ ಕುಡಿಯುವ ನೀರಿನ ವಿತರಣೆಗಾಗಿ ಮೊದಲ ವಾರ 6 ಕಿಲೋಮೀಟರ್ 700 ಮೀಟರ್ ಮತ್ತು ಎರಡನೇ ವಾರ 8 ಕಿಲೋಮೀಟರ್ 300 ಮೀಟರ್ ಪೈಪ್ ಅಳವಡಿಸಲಾಯಿತು. ಒಟ್ಟು ಎಷ್ಟು ಕಿಲೋಮೀಟರ್ ದೂರ ಪೈಪು ಅಳವಡಿಸಲಾಯಿತು?

3. 'ರಕ್ತದಾನ ಮಹಾದಾನ' ಎಂಬ ಸಂದೇಶವನ್ನು ಸಾರಲು ಚಿನ್ನುವಿನ ಶಾಲೆಯ ನ್ಯಾಶನಲ್ ಸರ್ವಿಸ್ ಸ್ಕೀಮ್ (ಎನ್ ಎಸ್ ಎಸ್) ನ ಗೆಳೆಯರು ಸೈಕಲ್ ಜಾಥಾ ನಡೆಸಿ ಎರಡು ದಿವಸಗಳಲ್ಲಾಗಿ 17 ಕಿಲೋಮೀಟರ್ 200 ಮೀಟರ್ ಸಂಚರಿಸಿದರು. ಮೊದಲ ದಿನ 9 ಕಿಲೋಮೀಟರ್ 300 ಮೀಟರ್ ದೂರ ಸಂಚರಿಸಿದರು. ಎರಡನೇ ದಿನ ಸಂಚರಿಸಿದ ದೂರ ಎಷ್ಟು?

4. ಮಳೆಗಾಲ ಪೂರ್ವದ ಶುಚೀಕರಣ ಚಟುವಟಿಕೆಗಳ ಭಾಗವಾಗಿ 15 ಕಿಲೋಮೀಟರ್ ಉದ್ದವಿರುವ ಇರುವೇಳಿ ನದಿಯನ್ನು ಮೂರು ದಿನಗಳಲ್ಲಾಗಿ ಶುಚಿಗೊಳಿಸಿದರು. ಮೊದಲನೇ ದಿನ 4 ಕಿಲೋಮೀಟರ್ 325 ಮೀಟರ್ ದೂರವನ್ನು ಮತ್ತು ಎರಡನೇ ದಿನ 6 ಕಿಲೋಮೀಟರ್ 500 ಮೀಟರ್ ದೂರವನ್ನು ಶುಚಿ ಮಾಡಲಾಯಿತು. ಮೂರನೇ ದಿನ ಶುಚಿ ಮಾಡಿದ ದೂರವೆಷ್ಟು?

5. ಕಲಿಕೋತ್ಸವದ ಅಂಗವಾಗಿ ಬ್ಯಾಡ್ಜ್ ತಯಾರಿಸುವುದಕ್ಕಾಗಿ ಲಿನಿಯು ರಿಬ್ಬನ್‌ಗಳನ್ನು ಕತ್ತರಿಸಿ ತನ್ನ ಗೆಳೆಯರಿಗೆ ಕೊಟ್ಟಳು. ಪಟ್ಟಿಯನ್ನು ನೋಡಿ ಪ್ರಶ್ನೆಗಳ ಉತ್ತರವನ್ನು ಕಂಡುಹಿಡಿಯಿರಿ.

| ಹೆಸರು | ರಿಬ್ಬನಿನ ಉದ್ದ |
|---|---|
| ಜಾನ್ವಿ | 24 ಸೆ ಮೀ 6 ಮಿ ಮೀ |
| ಹಾದಿಯ | 21 ಸೆ ಮೀ 5 ಮಿ ಮೀ |
| ಅಭಿ | 19 ಸೆ ಮೀ 4 ಮಿ ಮೀ |
| ಫಾರಿಸ್ | 26 ಸೆ ಮೀ 7 ಮಿ ಮೀ |

- ಹಾದಿಯಳಿಗೆ ಸಿಕ್ಕಿದ ರಿಬ್ಬನ್‌ಗಿಂತಲೂ ಫಾರಿಸ್‌ಗೆ ಸಿಕ್ಕಿದ ರಿಬ್ಬನಿನ ಉದ್ದವು ಎಷ್ಟು ಹೆಚ್ಚಾಗಿದೆ?
- ಜಾನ್ವಿ ಮತ್ತು ಅಭಿ ತಮಗೆ ಸಿಕ್ಕಿದ ರಿಬ್ಬನುಗಳನ್ನು ಜೋಡಿಸಿ ಇರಿಸಿ ಅಳೆದು ನೋಡಿದರು. ಒಟ್ಟು ಉದ್ದ ಎಷ್ಟಾಗಿರಬಹುದು?
- ಬಾಕಿ ಉಳಿದ ರಿಬ್ಬನನ್ನು ಫಾರಿಸ್‌ಗೆ ಸಿಕ್ಕಿದ ರಿಬ್ಬನಿನ ತುದಿಗೆ ಜೋಡಿಸಿ ಅಳೆದಾಗ ಒಟ್ಟು ಉದ್ದವು 40 ಸೆಂಟಿಮೀಟರ್ ಆಯಿತು. ಹಾಗಾದರೆ ಬಾಕಿ ಉಳಿದ ರಿಬ್ಬನಿನ ಉದ್ದ ಎಷ್ಟು?

6. ಕ್ರೀಡಾಕೂಟದ ತೋರಣ ಕಟ್ಟುವುದಕ್ಕೆ ಹಲವು ಬಣ್ಣಗಳ ರಿಬ್ಬನ್ ಖರೀದಿಸಲಾಯಿತು.

- 42 ಸೆಂಟಿಮೀಟರ್ 50 ಮಿಲ್ಲಿಮೀಟರ್ ಉದ್ದವಿರುವ ಹಸಿರು ರಿಬ್ಬನ್‌ನಿಂದ ಒಂದು ರಿಬ್ಬನ್‌ನ ಬಳೆಯನ್ನು ನಿರ್ಮಿಸಲು 10 ಸೆಂಟಿಮೀಟರ್ 5 ಮಿಲ್ಲಿಮೀಟರ್ ತುಂಡರಿಸಿ ತೆಗೆಯಲಾಯಿತು. ಬಾಕಿ ಉಳಿದ ತುಂಡಿನ ಉದ್ದವೆಷ್ಟು?
- 35 ಸೆಂಟಿಮೀಟರ್ 8 ಮಿಲ್ಲಿಮೀಟರ್ ಉದ್ದವಿರುವ ಕೆಂಪು ರಿಬ್ಬನ್ ನಿಂದ 10 ಸೆಂಟಿಮೀಟರ್ 5 ಮಿಲ್ಲಿಮೀಟರ್ ಉದ್ದವಿರುವ ಒಂದು ತುಂಡನ್ನು ಕತ್ತರಿಸಿ ತೆಗೆದರೆ ಬಾಕಿ ಉಳಿಯುವ ರಿಬ್ಬನಿನ ಉದ್ದವೆಷ್ಟು?
- 95 ಸೆಂಟಿಮೀಟರ್ 4 ಮಿಲ್ಲಿಮೀಟರ್ ಉದ್ದವಿರುವ ನೀಲ ರಿಬ್ಬನ್‌ನಿಂದ 10 ಸೆಂಟಿಮೀಟರ್ 5 ಮಿಲ್ಲಿಮೀಟರ್ ಉದ್ದವಿರುವ ಎರಡು ತುಂಡುಗಳನ್ನು ಕತ್ತರಿಸಿ ತೆಗೆದರೆ ಬಾಕಿ ಉಳಿಯುವ ರಿಬ್ಬನ್‌ನ ಉದ್ದವೆಷ್ಟು?

# 9

# ಸಮಾನವಾದ ಗುಂಪು



ಪಟ್ಟುಮಲ ಎಲ್. ಪಿ ಶಾಲೆಯ ವೃತ್ತಿಪರಿಚಯ ಶಿಬಿರದ ಚಿತ್ರವನ್ನು ನೋಡಿರಿ. ಚಿತ್ರದಲ್ಲಿ ಏನೆಲ್ಲಾ ಕಾಣುತ್ತಿದೆ? ನೋಟ್ ಪುಸ್ತಕದಲ್ಲಿ ಬರೆಯಿರಿ.

## ಸಮಾನಗೊಳಿಸುವ

ಪಟ್ಟುಮಲ ಎಲ್. ಪಿ. ಶಾಲೆಯ 'ಹರಿತಂ' ವೃತ್ತಿಪರಿಚಯ ಕ್ಲಬ್ ನಿರ್ಮಿಸಿದ ಸಾಬೂನುಗಳನ್ನು ನೋಡಿರಿ. ಚಿತ್ರದಲ್ಲಿ ಎಷ್ಟು ಸಾಬೂನುಗಳಿವೆ?



.... × ..... =

ಸಾಬೂನುಗಳ ಸಂಖ್ಯೆ ಸಮಾನವಾಗಿರುವಂತೆ ಎರಡು ಪೆಟ್ಟಿಗೆಯಲ್ಲಿ ಇರಿಸಿದರೋ?



ಒಂದು ಪೆಟ್ಟಿಗೆಯೊಳಗೆ ಎಷ್ಟು ಸಾಬೂನು-ಗಳಿವೆ?

ಸಾಬೂನುಗಳ ಸಂಖ್ಯೆ ಸಮಾನವಾಗಿರುವಂತೆ 3 ಪೆಟ್ಟಿಗೆಯಲ್ಲಿ ತುಂಬಿಸಿದರೋ? ಕೆಳಗೆ ಕೊಟ್ಟಿರುವ ಚಿತ್ರದಲ್ಲಿಯೇ ಚಿತ್ರಿಸಿರಿ.



ಈಗ ಒಂದು ಪೆಟ್ಟಿಗೆಯೊಳಗೆ ಎಷ್ಟು ಸಾಬೂನುಗಳಿವೆ?

ಸಾಬೂನುಗಳ ಸಂಖ್ಯೆ ಸಮಾನವಾಗುವಂತೆ 4 ಪೆಟ್ಟಿಗೆಯೊಳಗೆ ಹಾಕಿದರೋ? ಚಿತ್ರಿಸಿರಿ.



ಈಗ ಒಂದು ಪೆಟ್ಟಿಗೆಯೊಳಗೆ ಎಷ್ಟು ಸಾಬೂನುಗಳಿವೆ?

ಸಾಬೂನುಗಳ ಸಂಖ್ಯೆ ಸಮಾನವಾಗುವಂತೆ 6 ಪೆಟ್ಟಿಗೆಯೊಳಗೆ ಹಾಕಿದರೋ? ಚಿತ್ರಿಸಿರಿ.



ಈಗ ಒಂದು ಪೆಟ್ಟಿಗೆಯೊಳಗೆ ಎಷ್ಟು ಸಾಬೂನುಗಳಿವೆ?

ಸಾಬೂನುಗಳ ಸಂಖ್ಯೆ ಸಮಾನವಾಗುವಂತೆ 9 ಪೆಟ್ಟಿಗೆಯೊಳಗೆ ಹಾಕಿದರೋ? ಚಿತ್ರಿಸಿರಿ.



ಈಗ ಒಂದು ಪೆಟ್ಟಿಗೆಯೊಳಗೆ ಎಷ್ಟು ಸಾಬೂನುಗಳಿವೆ?

## ಈ ರೀತಿಯೂ ಲೆಕ್ಕ ಹಾಕಬಹುದು

36 ಸಾಬೂನುಗಳನ್ನು ಸಮಾನ ಸಂಖ್ಯೆಯ ಎರಡು ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿ ಎಷ್ಟಿರಬಹುದು?

ಗಣಿತ ಭಾಷೆಯಲ್ಲಿ ಹೀಗೆ ಬರೆಯಬಹುದು.

$36 \div 2 =$




36 ಸಾಬೂನುಗಳನ್ನು ಸಮಾನ ಸಂಖ್ಯೆಯ 3 ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿ ಎಷ್ಟಿರುವುದು?

$36 \div 3 =$     $3 \times .... = 36$

36 ಸಾಬೂನುಗಳನ್ನು ಸಮಾನ ಸಂಖ್ಯೆಯ 4 ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿ ಎಷ್ಟಿರುವುದು?

$36 \div 4 =$     $4 \times .... = 36$

36 ಸಾಬೂನುಗಳನ್ನು ಸಮಾನ ಸಂಖ್ಯೆಯ 6 ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿ ಎಷ್ಟಿರುವುದು?

$36 \div 6 =$     $6 \times .... = 36$

36 ಸಾಬೂನುಗಳನ್ನು ಸಮಾನ ಸಂಖ್ಯೆಯ 9 ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿ ಎಷ್ಟಿರುವುದು?

$36 \div 9 =$     $9 \times .... = 36$

## ಕೋಣೆಗಳನ್ನು ಪೂರ್ತಿಗೊಳಿಸಿರಿ




3,6 ಎಂಬೀ ಸಂಖ್ಯೆಗಳ ಬದಲಿಗೆ ಇತರ ಸಂಖ್ಯೆಗಳನ್ನು ಉಪಯೋಗಿಸಿ ಇದೇ ರೀತಿಯಲ್ಲಿ ನೋಟ್ ಪುಸ್ತಕದಲ್ಲಿ ಬರೆಯಿರಿ.

## ಪ್ಯಾಕೆಟ್‌ನಲ್ಲಿ ತುಂಬಿಸುವ

ಪ್ರತಿಯೊಂದು ದಿನ ವೃತ್ತಿಪರಿಚಯ ಕ್ಲಬ್ ತಯಾರಿಸಿದ ಸಾಬೂನುಗಳ ಸಂಖ್ಯೆಯನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ದಿನ | ಸಂಖ್ಯೆ | ಪ್ಯಾಕೆಟ್ ಗಳ ಸಂಖ್ಯೆ | |
|---|---|---|---|
| | | ಪ್ರತಿಯೊಂದು ಪ್ಯಾಕೆಟ್ ನಲ್ಲಿಯೂ 2 ರಂತೆ | ಪ್ರತಿಯೊಂದು ಪ್ಯಾಕೆಟ್ ನಲ್ಲಿಯೂ 4 ರಂತೆ |
| ಸೋಮವಾರ | 36 | | |
| ಮಂಗಳವಾರ | 32 | | |
| ಬುಧವಾರ | 24 | | |
| ಗುರುವಾರ | 48 | | |
| ಶುಕ್ರವಾರ | 40 | | |
| ಒಟ್ಟು | | | |

2 ರಂತೆ ತುಂಬಿಸಿದಾಗಲೂ 4 ರಂತೆ ತುಂಬಿಸಿದಾಗಲೂ ಪ್ಯಾಕೆಟುಗಳ ಸಂಖ್ಯೆಗಳಲ್ಲಿ ಯಾವ ಬದಲಾವಣೆ ಉಂಟಾಯಿತು?

ಒಟ್ಟು ಸಾಬೂನುಗಳ ಸಂಖ್ಯೆ ಎಷ್ಟು?

**ನಾನು ಲೆಕ್ಕ ಮಾಡಿದ ರೀತಿ**

ಒಂದು ಸಾಬೂನನ್ನು 20 ರೂಪಾಯಿಗೆ ಮಾರಿದರೆ ಕ್ಲಬ್‌ಗೆ ಒಟ್ಟು ಎಷ್ಟು ರೂಪಾಯಿ ಲಭಿಸುವುದು? ಹೇಗೆ ಕಂಡುಹಿಡಿಯಬಹುದು?

**ನಾನು ಲೆಕ್ಕ ಮಾಡಿದ ರೀತಿ**

ಸಿಕ್ಕಿದ ಎಲ್ಲವೂ 100 ರೂಪಾಯಿ ನೋಟುಗಳಾದರೆ ನೋಟುಗಳ ಸಂಖ್ಯೆ?

ಎಲ್ಲವೂ 200 ರೂಪಾಯಿಯ ನೋಟುಗಳಾದರೆ ಎಷ್ಟು ನೋಟುಗಳು?

ಭಾಗಾಕಾರ ಚಿಹ್ನೆ ಉಪಯೋಗಿಸಿ ಬರೆದರೋ.

$3600 \div 100 =$ .........

......... $\div 200 =$ .........

## ಬಾಯಿಲೆಕ್ಕವಾಗಿ ಮಾಡಬಹುದೇ?

| | | | |
|---|---|---|---|
| $36 \div 2 =$ ............ | $36 \div 4 =$............ | $40 \div 2 =$ ............ | $40 \div 4 =$ ............ |
| $32 \div 2 =$ ............ | $32 \div 4 =$ ............ | $72 \div 2 =$ ............ | $72 \div 4 =$ ............ |

ಮೇಲಿನ ಪಟ್ಟಿಯನ್ನು ಉಪಯೋಗಿಸಿ $76 \div 2$ ಕಂಡುಹಿಡಿಯುವುದು ಹೇಗೆ?

$76 = 40 + 36$ ಆಗಿದೆಯಲ್ಲವೇ.

40 ನ್ನು 2 ಸಮಾನ ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿರುವ ಸಂಖ್ಯೆ = ................

36 ನ್ನು 2 ಸಮಾನ ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿರುವ ಸಂಖ್ಯೆ =...............

76 ನ್ನು 2 ಸಮಾನ ಗುಂಪುಗಳಾಗಿ ಮಾಡಿದರೆ ಒಂದು ಗುಂಪಿನಲ್ಲಿರುವ ಸಂಖ್ಯೆ =...............

## ಲೆಕ್ಕ ಹಾಕಿರಿ

| | | |
|---|---|---|
| $68 \div 2 =$ ............ | $68 \div 4 =$............ | $76 \div 4 =$ ............ |

## ಪೂರ್ತಿಗೊಳಿಸಿರಿ...

| | | | |
|---|---|---|---|
| $8 \times 6 = 48$ | $9 \times 4 = 36$ | $7 \times 6 = 42$ | $6 \times 5 = 30$ |
| $48 \div 8 = 6$<br>$48 \div 6 = 8$ | $36 \div 4 =$ ...<br>..................... | .....................<br>..................... | .....................<br>..................... |

ಕಂಡು ಹಿಡಿದ ಸಂಬಂಧವನ್ನು ನೋಟ್ ಪುಸ್ತಕದಲ್ಲಿ ಬರೆಯಿರಿ.

## ಬೊಂಬೆ ನಿರ್ಮಾಣ

ವೃತ್ತಿ ಪರಿಚಯ ಶಿಬಿರದಲ್ಲಿ ಮಕ್ಕಳನ್ನು ಗುಂಪು ಮಾಡಲಾಯಿತು. ಪ್ರತಿಯೊಂದು ಗುಂಪು 48 ಬೊಂಬೆಗಳನ್ನು ನಿರ್ಮಿಸಿದರು. ಇವುಗಳನ್ನು 6 ಪೆಟ್ಟಿಗೆಯೊಳಗೆ ಸಮಾನವಾಗಿ ತುಂಬಿಸಿಡಲಾಗುವುದು. ಒಂದನೇ ಗುಂಪಿನ ಲೀಡರಾದ ಸನ ಇರಿಸಿದ ರೀತಿಯನ್ನು ನೋಡಿರಿ.

ಪ್ರತಿ ಪೆಟ್ಟಿಗೆಯೊಳಗೆ ಒಂದು ಬೊಂಬೆಯಂತೆ ಇರಿಸಿದಳು.



ಒಟ್ಟು ಎಷ್ಟು ಬೊಂಬೆಗಳನ್ನು ಪೆಟ್ಟಿಗೆಯೊಳಗೆ ಇರಿಸಿದಳು?

ಬಾಕಿ ಎಷ್ಟು ಉಳಿಯಿತು?

ಇನ್ನೂ ಒಂದೊಂದರಂತೆ ಇರಿಸಿದರೋ?



ಪುನಃ ಎಷ್ಟು ಬೊಂಬೆಗಳು ಬೇಕಾಯಿತು?

ಇನ್ನು ಎಷ್ಟು ಬೊಂಬೆಗಳು ಬಾಕಿ ಉಳಿದಿವೆ?

ಈ ರೀತಿಯಲ್ಲಿ ಮುಂದುವರಿಸಿದರೋ?

ಪ್ರತಿಯೊಂದು ಪೆಟ್ಟಿಗೆಯಲ್ಲಿ ಒಟ್ಟು ಎಷ್ಟು ಬೊಂಬೆಗಳನ್ನು ಇರಿಸಬಹುದು?

ಗಣಿತ ಭಾಷೆಯಲ್ಲಿ ಬರೆದಾಗ.

..... ÷ ..... = .....

$48 - 6 = 42$

$42 - 6 = 36$

$36 - 6 = 30$

..........................................

..........................................

..........................................

..........................................

..........................................

## ಬೊಂಬೆಗಳನ್ನು ಸಮಾನವಾಗಿ ಹಂಚಿದ ಚಿತ್ರೀಕರಣವನ್ನು ನೋಡಿರಿ.

| ಬೊಂಬೆಗಳ ಸಂಖ್ಯೆ | ಪೆಟ್ಟಿಗೆ 1 | ಪೆಟ್ಟಿಗೆ 2 | ಪೆಟ್ಟಿಗೆ 3 | ಪೆಟ್ಟಿಗೆ 4 | ಪೆಟ್ಟಿಗೆ 5 | ಪೆಟ್ಟಿಗೆ 6 | ಉಳಿದ ಬೊಂಬೆಗಳು |
|---|---|---|---|---|---|---|---|
| 6 | | | | | | | 48 − 6 = 42 |
| 6 | | | | | | | 42 − 6 = 36 |
| 6 | | | | | | | 36 − 6 = 30 |
| 6 | | | | | | | 30 − 6 = 24 |
| 6 | | | | | | | 24 − 6 = 18 |
| 6 | | | | | | | 18 − 6 = 12 |
| 6 | | | | | | | 12 − 6 = 6 |
| 6 | | | | | | | 6 − 6 = 0 |
| **ಒಟ್ಟು** | **8** | **8** | **8** | **8** | **8** | **8** | **6 × 8 = 48** |

48 ಬೊಂಬೆಗಳನ್ನು ಸಮಾನ ಸಂಖ್ಯೆಯ 6 ಗುಂಪುಗಳಾಗಿ ಮಾಡಲಾಯಿತು. ಪ್ರತಿಯೊಂದು ಗುಂಪಿನಲ್ಲಿಯೂ 8 ಬೊಂಬೆಗಳಿವೆ.

ಗಣಿತ ಭಾಷೆಯಲ್ಲಿ ಬರೆದರೆ 48 ÷ 6 = ........

48 ಬೊಂಬೆಗಳನ್ನು ಒಂದು ಪೆಟ್ಟಿಗೆಯಲ್ಲಿ 8 ರಂತೆ ಎಷ್ಟು ಪೆಟ್ಟಿಗೆಯಲ್ಲಿ ತುಂಬಿಸಬಹುದು?

## ಹೀಗೂ ಇರಿಸಬಹುದು

ಎರಡನೇ ಗುಂಪು ಪೆಟ್ಟಿಗೆಯೊಳಗೆ ಬೊಂಬೆಗಳನ್ನು ಇಟ್ಟಿರುವುದನ್ನು ನೋಡಿರಿ.

ಪ್ರತಿ ಪೆಟ್ಟಿಗೆಯಲ್ಲಿಯೂ 5 ರಂತೆ ಇಟ್ಟರು.

ಒಟ್ಟು ಎಷ್ಟು ಬೊಂಬೆಗಳನ್ನು ಇಡಲಾಯಿತು? $6 \times 5 =$ .....

ಇನ್ನು ಎಷ್ಟು ಬೊಂಬೆಗಳನ್ನು ಇಡಬೇಕಾಗಿದೆ? [ ]

ಪ್ರತಿಯೊಂದು ಪೆಟ್ಟಿಗೆಯಲ್ಲಿ
ಇನ್ನೂ 5 ರಂತೆ ಇಡಲು ಸಾಧ್ಯವೇ?

2 ರಂತೆ ಇಟ್ಟರೋ? ಎಷ್ಟು ಇಡಬಹುದು? ..... × ..... = .....

ಬಾಕಿ ಎಷ್ಟು ಉಳಿಯುವುದು? [ ]

ಇವುಗಳನ್ನು ಪ್ರತಿಯೊಂದು ಪೆಟ್ಟಿಗೆಯಲ್ಲಿ ಎಷ್ಟರಂತೆ ಇಡಬಹುದು? ..... × ..... = .....

ಪ್ರತಿಯೊಂದು ಪೆಟ್ಟಿಗೆಯೊಳಗೆ
ಒಟ್ಟು ಎಷ್ಟಿವೆ? $5 + 2 + 1 = 8$

| ಬೊಂಬೆಗಳ ಸಂಖ್ಯೆ | ಪೆಟ್ಟಿಗೆ 1 | ಪೆಟ್ಟಿಗೆ 2 | ಪೆಟ್ಟಿಗೆ 3 | ಪೆಟ್ಟಿಗೆ 4 | ಪೆಟ್ಟಿಗೆ 5 | ಪೆಟ್ಟಿಗೆ 6 | ಉಳಿದ ಬೊಂಬೆಗಳು |
|---|---|---|---|---|---|---|---|
| $6 \times 5 = 30$ |  |  |  |  |  |  | $48 - 30 = 18$ |
| $6 \times 2 = 12$ |  |  |  |  |  |  | $18 - 12 = 6$ |
| $6 \times 1 = 6$ |  |  |  |  |  |  | $6 - 6 = 0$ |
| **ಒಟ್ಟು ಸಂಖ್ಯೆ** | **8** | **8** | **8** | **8** | **8** | **8** | **$6 \times 8 = 48$** |

48 ಬೊಂಬೆಗಳನ್ನು ಸಮಾನ ಸಂಖ್ಯೆಯ 6 ಗುಂಪುಗಳಾಗಿ ಮಾಡಲಾಯಿತು. ಪ್ರತಿಯೊಂದು ಗುಂಪಿನಲ್ಲಿಯೂ 8 ಬೊಂಬೆಗಳಿವೆ.

ಗಣಿತ ಭಾಷೆಯಲ್ಲಿ ಬರೆದರೆ $48 \div 6 = 8$

ಕ್ರಿಯೆಯನ್ನು ಹೀಗೆಯೂ ಬರೆಯಬಹುದು.

| | |
|---|---|
| 5 ರಂತೆ ಇಟ್ಟಾಗ ($6 \times 5$) | 48– 30 |
| 2 ರಂತೆ ಇಟ್ಟಾಗ ($6 \times 2$) | 18– 12 |
| 1 ರಂತೆ ಇಟ್ಟಾಗ ($6 \times 1$) | 6– 6 |

| | 6 | |
|---|---|---|
| 5 | 48– 30 | $6 \times 5$ |
| 2 | 18– 12 | $6 \times 2$ |
| 1 | 6– 6 | $6 \times 1$ |
| **$48 \div 6 = 8$** | **0** | **$6 \times 8 = 48$** |

## ಫ್ರೂಟ್ ಸಲಾಡ್

ಶಿಬಿರದಲ್ಲಿ ಫ್ರೂಟ್ ಸಲಾಡ್ ತಯಾರಿಸುವ ಚಟುವಟಿಕೆಯೂ ಇದೆ. ಸಲಾಡ್ ತಯಾರಿಸಲು 48 ಓರೆಂಜ್‌ಗಳನ್ನು ತರಲಾಯಿತು.

ಇದನ್ನು ಮಕ್ಕಳ 6 ಗುಂಪುಗಳಿಗೆ ಸಮಾನವಾಗಿ ಹಂಚಬೇಕು.
ಮೊದಲು ಪ್ರತಿಯೊಂದು ಗುಂಪಿಗೂ 6 ರಂತೆ ನೀಡಲಾಯಿತು.

ಒಟ್ಟು ಎಷ್ಟು ಕೊಡಲಾಯಿತು? $6 \times 6 =$ .....

ಬಾಕಿ ಎಷ್ಟು ಉಳಿಯಿತು?

ಇವುಗಳನ್ನು ಪ್ರತಿ ಗುಂಪಿಗೆ 2 ರಂತೆ ನೀಡಿದರೋ?
ಒಟ್ಟು ಎಷ್ಟು ಓರೆಂಜ್‌ಗಳನ್ನು ನೀಡಬಹುದು? $6 \times 2 =$ .....

ಪ್ರತಿಯೊಂದು ಗುಂಪಿಗೂ ಒಟ್ಟು ಎಷ್ಟು ಓರೆಂಜ್‌ಗಳು ಸಿಕ್ಕಿತು? $6 + 2 = 8$

48 ಓರೆಂಜ್‌ಗಳನ್ನು 6 ಗುಂಪುಗಳಿಗೂ ಸಮಾನವಾಗಿ ಹಂಚಿದಾಗ ಪ್ರತಿಯೊಂದು ಗುಂಪಿಗೆ ಒಟ್ಟು ಎಷ್ಟು ಸಿಕ್ಕಿತು?

ಇದನ್ನು ಗಣಿತ ಭಾಷೆಯಲ್ಲಿ ಬರೆಯಿರಿ.

## ಓರೆಂಜ್ ಹಂಚಿದ ರೀತಿ

| ಕೊಟ್ಟ ಓರೆಂಜ್‌ಗಳು | ಗುಂಪು 1 | ಗುಂಪು 2 | ಗುಂಪು 3 | ಗುಂಪು 4 | ಗುಂಪು 5 | ಗುಂಪು 6 | ಬಾಕಿ |
|---|---|---|---|---|---|---|---|
| 6 × 6= 36 |  |  |  |  |  |  | 48 – 36 = 12 |
| 6 × 2= 12 |  |  |  |  |  |  | 12 – 12 = 0 |
| ಒಟ್ಟು | **8** | **8** | **8** | **8** | **8** | **8** | **6 × 8 = 48** |

ಓರೆಂಜ್ ಹಂಚಿದ ರೀತಿಯನ್ನು ಹೀಗೆ ಬರೆಯಬಹುದು.

| | |
|---|---|
| 6 ರಂತೆ ಕೊಟ್ಟಾಗ (6 × 6) | 48 – 36 |
| 2 ರಂತೆ ಕೊಟ್ಟಾಗ (6 × 2) | 12 – 12 |

| | | **6** | |
|---|---|---|---|
| | 6 | 48– 36 | (6 × 6) |
| | 2 | 12– 12 | (6 × 2) |
| **48 ÷ 6 = 8** | | **0** | **6 × 8 = 48** |

## ಎರಡು ಸಲ ಮಾತ್ರ

ಪ್ರತಿಯೊಂದು ಗುಂಪಿಗೂ ಎರಡು ಸಲ ಮಾತ್ರವೇ ಓರೆಂಜ್ ಕೊಡಲು ಅವಕಾಶವಿರುವುದಾದರೆ, ಯಾವೆಲ್ಲಾ ರೀತಿಯಲ್ಲಿ ಸಮಾನವಾಗಿ ಹಂಚಬಹುದು?

ಕೆಳಗೆ ಕೊಟ್ಟಿರುವಂತೆ ಬರೆದು ನೋಡಿರಿ. ಇದಲ್ಲದೆ ಇತರ ರೀತಿಗಳಿವೆಯೇ?




## ಪಝಲ್ ಕಾರ್ನರ್




ಪ್ರತಿಯೊಂದು ಸಾಲಿನಲ್ಲಿ ಮೂರು ಸಂಖ್ಯೆಗಳನ್ನು ಗುಣಿಸಿದಾಗ 72 ಸಿಗಬೇಕು.




ಅಡ್ಡಕ್ಕೂ ನೀಟಕ್ಕೂ ಇರುವ 3 ಸಂಖ್ಯೆಗಳನ್ನು ಗುಣಿಸಿದಾಗ 72 ಸಿಗಬೇಕು.
ಮಧ್ಯದ ಸಂಖ್ಯೆ 2 ರ ಬದಲು 3, 4 ಎಂಬಿವುಗಳಾದಾಗ ಇತರ ಸಂಖ್ಯೆಗಳನ್ನು ಕಂಡುಹಿಡಿಯಬಹುದೇ.

## ಚೋಕ್ ನಿರ್ಮಾಣ

ವೃತ್ತಿ ಪರಿಚಯ ಕ್ಲಬ್ ತಯಾರಿಸಿದ ಚೋಕ್‌ಗಳನ್ನು ಪ್ರತಿಯೊಂದು ಪೆಟ್ಟಿಗೆಯಲ್ಲಿ 10 ರಂತೆ ತುಂಬಿಸಲಾಗಿದೆ. ಹೀಗೆ ತುಂಬಿಸಿದ 9 ಪೆಟ್ಟಿಗೆ ಚೋಕ್‌ಗಳನ್ನು ಮತ್ತು 6 ಚೋಕ್‌ಗಳನ್ನು ಶಾಲೆಯ ಎಂಟು ತರಗತಿಗಳಿಗೆ ಸಮಾನವಾಗಿ ಹಂಚಲಾಯಿತು.

ಪ್ರತಿಯೊಂದು ತರಗತಿಗೆ ಲಭಿಸಿದ ಚೋಕ್‌ಗಳ ಸಂಖ್ಯೆ ಎಷ್ಟು?



ಜಾನ್ವಿ ಲೆಕ್ಕಹಾಕಿದ ರೀತಿಯನ್ನು ನೋಡಿರಿ.

10 ರಂತೆ ಚೋಕ್‌ಗಳಿರುವ
9 ಪೆಟ್ಟಿಗೆಗಳಲ್ಲಿ ಒಟ್ಟು ಎಷ್ಟು ಚೋಕ್‌ಗಳಿವೆ?

6 ಚೋಕ್‌ಗಳನ್ನು ಸೇರಿಸಿದರೋ.
ಒಟ್ಟು ಎಷ್ಟು ಚೋಕ್‌ಗಳಿವೆ?

ಪ್ರತಿಯೊಂದು ತರಗತಿಗೂ ಲಭಿಸಿದ ಚೋಕ್‌ಗಳ ಸಂಖ್ಯೆಯನ್ನು ಹೇಗೆ ಕಂಡುಹಿಡಿಯಬಹುದು? ಇದಕ್ಕೆ ಹಲವು ರೀತಿಗಳಿವೆಯೇ?

**ನಾನು ಕಂಡುಹಿಡಿದ ರೀತಿ**




ಎಲ್ಲಾ ತರಗತಿಗಳಿಗೂ ಒಂದೊಂದು ಪೆಟ್ಟಿಗೆ ಚೋಕ್ ನೀಡಿದರೆ ಒಟ್ಟು ಎಷ್ಟು ಚೋಕ್ ನೀಡಬಹುದು?

............ × ............ = ............

ಬಾಕಿ ಎಷ್ಟು ಚೋಕ್ ಗಳಿವೆ?

ಇವುಗಳನ್ನು 8 ತರಗತಿಗಳಿಗೂ ಸಮಾನವಾಗಿ ಹಂಚಿದರೆ ಒಂದು ತರಗತಿಗೆ ಎಷ್ಟು ಚೋಕ್ ಲಭಿಸಬಹುದು?

ಹೀಗೆ ಆಲೋಚಿಸುವ

10 ಚೋಕ್ ಗಳಂತೆ 8 ತರಗತಿಗಳಿಗೆ ನೀಡಿದರೆ 80 ಚೋಕುಗಳನ್ನು ನೀಡಬಹುದು.

$8 \times 10 = 80$

ಬಾಕಿ 16 ಚೋಕ್‌ಗಳಿವೆ. ಇವುಗಳನ್ನು 2 ಚೋಕ್ ಗಳಂತೆ 8 ತರಗತಿಗಳಿಗೂ ನೀಡಿದರೆ, 16 ಚೋಕ್‌ಗಳನ್ನು ನೀಡಬಹುದು.

$8 \times 2 = 16$

$$96 \div 8 = (80 \div 8) + (16 \div 8) = 10 + 2 = 12$$

ಇದನ್ನು ಹೀಗೆಯೂ ಬರೆಯಬಹುದು.

| | | |
|---|---|---|
| | 8 | |
| 10 | 96 – <br> 80 | 8 × 10 = 80 |
| | 16 | 96 – 80 = 16 |
| 2 | 16 | 8 × 2 = 16 |
| 96 ÷ 8 = 12 | 0 | 8 × 12 = 96 |

**$10 \times 8 = 80$**

**$2 \times 8 = 16$**

**$12 \times 8 = 96$**

**$80 \div 8 = 10$**

**$16 \div 8 = 2$**

**$96 \div 8 = 12$**

## ಪಝುಲ್ ಕಾರ್ನರ್

ನನ್ನ ಚೀಲ ತುಂಬಾ ಮಾವಿನ ಹಣ್ಣುಗಳಿವೆ. ಅದರ ಅರ್ಧವನ್ನು ಮಾವನಿಗೆ ನೀಡಿದೆನು. ಬಾಕಿ ಇರುವುದರ ಅರ್ಧವನ್ನು ಗೆಳೆಯನಿಗೆ ನೀಡಿದೆನು. ಉಳಿದಿರುವ 5 ಮಾವಿನ ಹಣ್ಣನ್ನು ನೆರೆಮನೆಯವನಿಗೆ ಕೊಟ್ಟೆನು. ಹಾಗಾದರೆ ಆರಂಭದಲ್ಲಿ ಚೀಲದಲ್ಲಿದ್ದ ಮಾವಿನ ಹಣ್ಣುಗಳ ಸಂಖ್ಯೆ ಎಷ್ಟು?

## ಕಲರ್ ಪೆನ್ಸಿಲ್

ಮೇನ್ಮ ಸ್ಟೋರಿನಿಂದ ಇಶಾನ್ 20 ಕಲರ್ ಪೆನ್ಸಿಲ್‌ಗಳನ್ನು ಖರೀದಿಸಿದನು. ಒಂದು ಪೆನ್ಸಿಲಿನ ಬೆಲೆ 4 ರೂಪಾಯಿ. ಪೆನ್ಸಿಲ್ ಖರೀದಿಸಲು ಒಟ್ಟು ಎಷ್ಟು ರೂಪಾಯಿ ಖರ್ಚಾಯಿತು?

ಶ್ರದ್ಧಾ 76 ರೂಪಾಯಿಯ ಕಲರ್ ಪೆನ್ಸಿಲ್ ಖರೀದಿಸಿದಳು. ಒಟ್ಟು ಎಷ್ಟು ಪೆನ್ಸಿಲ್ ಖರೀದಿಸಿರಬಹುದು? ಲೆಕ್ಕ ಹಾಕುವುದು ಹೇಗೆ?

**ನಾನು ಲೆಕ್ಕ ಮಾಡಿದ ರೀತಿ**

## ಬಾಯಿಲೆಕ್ಕವಾಗಿ ಮಾಡಬಹುದೇ?

| | |
|---|---|
| 80 ÷ 4 = 20<br>80 − 4 = 76<br>76 ÷ 4 = ......... | 60 ÷ 3 = 20<br>60 − 3 = 57<br>57 ÷ 3 = ......... |
| 60 ÷ 6 = 10<br>60 − 6 = 54<br>54 ÷ 6 = ......... | 80 ÷ 4 = .........<br>80 + 4 = .........<br>84 ÷ 4 = ......... |
| 60 ÷ 3 = .........<br>60 + 3 = .........<br>63 ÷ 3 = ......... | 60 ÷ 3 = .........<br>60 + 9 = .........<br>69 ÷ 6 = ......... |
| 60 ÷ 6 = .........<br>60 + 12= .........<br>72 ÷ 6 = ......... | ............................<br>............................<br>............................ |

## ಬಿಲ್ ಪೂರ್ತಿಗೊಳಿಸಿರಿ



ಶಾಲಾ ಸ್ಟೋರಿನಿಂದ ಸಿಯೂತ್ ಮತ್ತು ಆದಿ ಒಂದೇ ಬೆಲೆಯ ವಸ್ತುಗಳನ್ನು ಖರೀದಿಸಿದರು. ಇಬ್ಬರೂ ಖರೀದಿಸಿದ ವಸ್ತುಗಳ ಬಿಲ್ ಗಳನ್ನು ಕೆಳಗೆ ನೀಡಲಾಗಿದೆ. ಆದಿಯ ಬಿಲ್‌ನಲ್ಲಿರುವ ಸಂಖ್ಯೆಗಳು ಮಾಸಿಹೋಗಿವೆ. ಅವುಗಳನ್ನು ಕಂಡುಹಿಡಿದು ಬರೆಯಬಹುದೇ?

**ಬಿಲ್ - 1**

| ಹೆಸರು: ಸಿಯೂತ್ | | ನಂ : 5732 |
|---|---|---|
| ವಸ್ತು | ಸಂಖ್ಯೆ | ಬೆಲೆ |
| ನೋಟ್ ಪುಸ್ತಕ | 4 | 72 ರೂ. |
| ಚಾರ್ಟ್ | 6 | 30 ರೂ. |
| ಪೆನ್ನು | 8 | 72 ರೂ. |
| ಸ್ಕೇಲ್ | 10 | 60 ರೂ. |
| ಒಟ್ಟು | | |

**ಬಿಲ್ - 2**

| ಹೆಸರು: ಆದಿ | | ನಂ : 5733 |
|---|---|---|
| ವಸ್ತು | ಸಂಖ್ಯೆ | ಬೆಲೆ |
| ಪೆನ್ನು | 6 | |
| ಸ್ಕೇಲ್ | 3 | |
| ನೋಟ್ ಪುಸ್ತಕ | 5 | |
| ಚಾರ್ಟ್ | 8 | |
| ಒಟ್ಟು | | |

| ನಾನು ಲೆಕ್ಕ ಮಾಡಿದ ರೀತಿ | ಸಹಪಾಠಿ ಲೆಕ್ಕ ಮಾಡಿದ ರೀತಿ |
|---|---|
| | |

## ಪರಮು ಅಣ್ಣನ ಹಣ್ಣಿನ ಅಂಗಡಿ

ಪರಮು ಅಣ್ಣನ ಹಣ್ಣಿನ ಅಂಗಡಿಯಲ್ಲಿ ಯಾವ ಯಾವ ಹಣ್ಣುಗಳಿವೆ ಎಂದು ತಿಳಿದಿದೆಯೇ?




| ಹಣ್ಣುಗಳು | ಸಂಖ್ಯೆ |
|---|---|
| ಸೇಬು | 35 |
| ಓರೆಂಜ್ | 36 |
| ಮಾವಿನ ಹಣ್ಣು | 50 |
| ಅನನಾಸು | 32 |

ಪಟ್ಟಿಯಲ್ಲಿರುವ ಸಂಖ್ಯೆಗಳಿಗನುಸರಿಸಿ ಪರಮು ಅಣ್ಣನು ಹಣ್ಣುಗಳನ್ನು ಕ್ರಮೀಕರಿಸಿ ಇರಿಸುತ್ತಿದ್ದಾನೆ.
ಸೇಬು ಗಳನ್ನು 7 ಟ್ರೇಗಳಲ್ಲಿ ಸಮಾನವಾಗಿ ಇಟ್ಟನು.

ಒಂದು ಟ್ರೇಯಲ್ಲಿ ಎಷ್ಟು ಸೇಬುಗಳಿವೆ?

ಓರೆಂಜ್ ಗಳನ್ನು 6 ಟ್ರೇಗಳಲ್ಲಿ ಸಮಾನವಾಗಿ ಇರಿಸಲಾಗಿದೆ.
ಒಂದು ಟ್ರೇಯಲ್ಲಿ ಎಷ್ಟು ಓರೆಂಜ್ ಗಳು ಇರಬಹುದು?

ಮಾವಿನ ಹಣ್ಣುಗಳನ್ನು 5 ಗುಂಪುಗಳಾಗಿ ಇಟ್ಟನು.
ಪ್ರತಿಯೊಂದು ಗುಂಪಿನಲ್ಲಿ ಎಷ್ಟು ಮಾವಿನ ಹಣ್ಣುಗಳಿರಬಹುದು?

ಅನನಾಸುಗಳನ್ನು 4 ರಂತೆ ಇರುವ ಗೊಂಚಲುಗಳಾಗಿ ತೂಗು ಹಾಕಿದನು.
ಎಷ್ಟು ಗೊಂಚಲುಗಳಿರಬಹುದು?

## ಅಕ್ಕಿ ವಿತರಣೆ



ಪಟ್ಟುಮಲ ಶಾಲೆಯ ಮಕ್ಕಳಿಗೆ ಓಣಂ ಪ್ರಯುಕ್ತ 5 ಕಿಲೋಗ್ರಾಂನಂತೆ ಅಕ್ಕಿ ವಿತರಿಸಲಾಗುವುದು. ಇದಕ್ಕಾಗಿ 37 ಗೋಣಿ ಅಕ್ಕಿ ತಲುಪಿತು. ಪ್ರತಿಯೊಂದು ಗೋಣಿಚೀಲದಲ್ಲೂ ಐವತ್ತು ಕಿಲೋ ಅಕ್ಕಿಯಿದೆ.

ಎಷ್ಟು ಮಕ್ಕಳಿಗೆ ಅಕ್ಕಿ ವಿತರಿಸಲು ಸಾಧ್ಯವಿದೆ?

ಹೇಗೆ ಕಂಡುಹಿಡಿಯುವುದು?

ಒಂದು ಮಗುವಿಗೆ ಎಷ್ಟು ಕಿಲೋ ಅಕ್ಕಿಯನ್ನು ಕೊಡುವುದು?

ಒಂದು ಗೋಣಿಚೀಲದಲ್ಲಿ ಎಷ್ಟು ಕಿಲೋ ಅಕ್ಕಿಯಿದೆ?

ಈ ಅಕ್ಕಿಯನ್ನು ಎಷ್ಟು ಮಕ್ಕಳಿಗೆ ವಿತರಿಸಲು ಸಾಧ್ಯವಿದೆ?

ಒಟ್ಟು ಎಷ್ಟು ಗೋಣಿ ಅಕ್ಕಿಯಿದೆ?

ಒಟ್ಟು ಎಷ್ಟು ಮಕ್ಕಳಿಗೆ ಅಕ್ಕಿ ವಿತರಿಸಲು ಸಾಧ್ಯವಿದೆ?

### ನಾನು ಲೆಕ್ಕ ಮಾಡಿದ ರೀತಿ

## ನೆಲ್ಲಿಕಾಯಿ ಲೆಕ್ಕ

ಮಿಲಾದ್ ಮತ್ತು ವಾಸು ಸ್ನೇಹಿತರು. ಮಿಲಾದ್ ಅಂಗಡಿಯಿಂದ ನೆಲ್ಲಿಕಾಯಿಗಳನ್ನು ಖರೀದಿಸಿದನು. ನೆಲ್ಲಿಕಾಯಿಗಳ ಸಂಖ್ಯೆ 10 ಕ್ಕಿಂತ ಹೆಚ್ಚು ಮತ್ತು 16 ಕ್ಕಿಂತ ಕಡಿಮೆ ಆಗಿದೆ. ಇದರಿಂದ ಅರ್ಧದಷ್ಟು ನೆಲ್ಲಿಕಾಯಿಗಳನ್ನು ವಾಸುವಿಗೆ ಕೊಟ್ಟನು. ವಾಸು ತನ್ನ 2 ಮಕ್ಕಳಿಗೂ ಮಿಲಾದ್ ತನ್ನ 3 ಮಕ್ಕಳಿಗೂ ನೆಲ್ಲಿಕಾಯಿಗಳನ್ನು ಸಮಾನವಾಗಿ ಹಂಚಿದರು. ವಾಸುವಿನ ಮಕ್ಕಳಿಗೋ ಮಿಲಾದ್ ನ ಮಕ್ಕಳಿಗೋ ಹೆಚ್ಚು ನೆಲ್ಲಿಕಾಯಿಗಳು ಲಭಿಸಿರುವುದು?

ಹೇಗೆ ಲೆಕ್ಕ ಹಾಕಿದಿರಿ ಎಂಬುವುದನ್ನು, ವಿವರಿಸಬಲ್ಲಿರಾ?

ಮಿಲಾದ್ ಖರೀದಿಸಿದ ನೆಲ್ಲಿಕಾಯಿಗಳ ಸಂಖ್ಯೆಯು ಯಾವ ಯಾವ ಸಂಖ್ಯೆಗಳಾಗಿರಬಹುದು?

15 ನೆಲ್ಲಿಕಾಯಿಗಳನ್ನು ಇಬ್ಬರಿಗೆ ಸಮಾನ ಸಂಖ್ಯೆಯಲ್ಲಿ ಹಂಚಲು ಸಾಧ್ಯವೇ?







ಮಿಲಾದ್ ಖರೀದಿಸಿದ ನೆಲ್ಲಿಕಾಯಿಗಳ ಸಂಖ್ಯೆ ಎಷ್ಟು?

ವಾಸುವಿಗೆ ಕೊಟ್ಟ ನೆಲ್ಲಿಕಾಯಿಗಳ ಸಂಖ್ಯೆ ಎಷ್ಟು?

ವಾಸುವಿನ ಪ್ರತಿ ಮಗುವಿಗೆ ಲಭಿಸಿದ ನೆಲ್ಲಿಕಾಯಿಗಳ ಸಂಖ್ಯೆ ಎಷ್ಟು?

ಮಿಲಾದ್‌ನ ಪ್ರತಿ ಮಗುವಿಗೆ ಲಭಿಸಿದ ನೆಲ್ಲಿಕಾಯಿಗಳ ಸಂಖ್ಯೆ ಎಷ್ಟು?

ಯಾರಿಗೆ ಹೆಚ್ಚು ನೆಲ್ಲಿಕಾಯಿಗಳು ಲಭಿಸಿತು?

ಎರಡನೇ ದಿನ ವಾಸು ನೆಲ್ಲಿಕಾಯಿಗಳನ್ನು ಖರೀದಿಸಿದನು. ನೆಲ್ಲಿಕಾಯಿಗಳ ಸಂಖ್ಯೆ 20 ಮತ್ತು 30 ರ ಎಡೆಯಲ್ಲಿ ಇತ್ತು. ನೆಲ್ಲಿಕಾಯಿಗಳಲ್ಲಿ ಅರ್ಧದಷ್ಟು ಮಿಲಾದ್‌ಗೆ ಕೊಟ್ಟನು. ಮಿಲಾದ್ ತನ್ನ 4 ಸ್ನೇಹಿತರಿಗೆ ಮತ್ತು ವಾಸು ತನ್ನ 3 ಸ್ನೇಹಿತರಿಗೆ ಸಮಾನವಾಗಿ ಕೊಟ್ಟನು.

ಯಾರ ಸ್ನೇಹಿತನಿಗೆ ಹೆಚ್ಚು ನೆಲ್ಲಿಕಾಯಿ ಲಭಿಸಿತು?

ವಾಸು ಖರೀದಿಸಿದ ನೆಲ್ಲಿಕಾಯಿಗಳ ಸಂಖ್ಯೆಯೆಷ್ಟು?

## ಜನ್ಮದಿನದ ಸಿಹಿ



ಶಾಲೆಯಲ್ಲಿ ನಾಲ್ಕನೇ ತರಗತಿಯ ಎರಡು ವಿಭಾಗಗಳಲ್ಲಾಗಿ ಒಟ್ಟು 40 ಮಕ್ಕಳಿದ್ದಾರೆ. ಶ್ರದ್ಧಾ ತನ್ನ ಜನ್ಮದಿನದಂದು ಪ್ರತಿ ಮಗುವಿಗೆ 4 ಮಿಠಾಯಿಗಳಂತೆ ನೀಡಲಾರಂಭಿಸಿದಳು. ಮಿಠಾಯಿ ಮುಗಿಯಿತು. ಆದರೆ 10 ಮಕ್ಕಳಿಗೆ ಮಿಠಾಯಿ ಲಭಿಸಲಿಲ್ಲ. ಅದಕ್ಕಾಗಿ ಹೆಚ್ಚಿನ ಮಿಠಾಯಿ ಖರೀದಿಸದೆ ಮಕ್ಕಳೇ ಸಮಸ್ಯೆಯನ್ನು ಪರಿಹರಿಸಿದರು. ಎಲ್ಲರಿಗೂ ಸಮಾನ ಸಂಖ್ಯೆಯ ಮಿಠಾಯಿಗಳು ಸಿಕ್ಕಿತು.

ಪ್ರತಿಯೊಬ್ಬರಿಗೂ ಎಷ್ಟು ಮಿಠಾಯಿಗಳಂತೆ ಸಿಕ್ಕಿತು?

ಹೇಗೆ ಲೆಕ್ಕ ಮಾಡಿದಿರಿ?

**ನಾನು ಲೆಕ್ಕ ಮಾಡಿದ ರೀತಿ**

**ಪಝ್ಲ್ ಕಾರ್ನರ್**

'ಹರಿತಂ' ವೃತ್ತಿ ಪರಿಚಯ ಕ್ಲಬ್‌ನವರು ತಯಾರಿಸಿದ ಸಾಬೂನುಗಳನ್ನು ಒಂದು ಪೆಟ್ಟಿಗೆಯಲ್ಲಿ 2 ರಂತೆ, 3 ರಂತೆ, 4 ರಂತೆ, 6 ರಂತೆ ತುಂಬಿಸಲು ಸಾಧ್ಯವಿದೆ. ಹಾಗಾದರೆ ಕಡಿಮೆಯೆಂದರೆ ಎಷ್ಟು ಸಾಬೂನುಗಳಿರಬಹುದು?

## ಆಡಿ ಆನಂದಿಸುವ

ದಾಳ ಎಸೆಯಿರಿ. ಪ್ರತಿಯೊಂದು ಕೋಣೆಯಲ್ಲಿರುವ ಕ್ರಿಯೆಗಳಿಗನುಸರಿಸಿ ಕಾಯಿಗಳನ್ನು ಸರಿಸಿರಿ.



## ಸ್ವಾಗತ ಸಮಿತಿ



ವೃತ್ತಿ ಪರಿಚಯ ಶಿಬಿರದ ಸ್ವಾಗತ ಸಮಿತಿ ಸಭೆಗೆ 84 ರಕ್ಷಕರು ಬಂದರು. ಪ್ರತಿಯೊಂದು ಸಾಲಿನಲ್ಲಿರುವ ಆರು ಕುರ್ಚಿಗಳಲ್ಲಿ ಅವರು ಕುಳಿತರು. ಒಟ್ಟು ಎಷ್ಟು ಸಾಲುಗಳಿವೆ?

ಸಭೆ ಪ್ರಾರಂಭವಾದಾಗ, ಇನ್ನೂ ಕೆಲವು ರಕ್ಷಕರು ಬಂದರು. ಸಾಲುಗಳ ಸಂಖ್ಯೆಯನ್ನು ಹೆಚ್ಚಿಸಲಿಲ್ಲ. ಹೆಚ್ಚಿನ ಕುರ್ಚಿಗಳನ್ನು ಇರಿಸಲಾಯಿತು. ಪ್ರತಿ ಸಾಲಿನಲ್ಲಿಯೂ 8 ಜನರಾದರು. ಹಾಗಾದರೆ ಒಟ್ಟು ಎಷ್ಟು ಜನರು ಸಭೆಯಲ್ಲಿ ಭಾಗವಹಿಸಿದರು?

| ನಾನು ಲೆಕ್ಕ ಮಾಡಿದ ರೀತಿ | ಸಹಪಾಠಿ ಲೆಕ್ಕ ಮಾಡಿದ ರೀತಿ |
|---|---|
| | |

ಸಭೆ ಪ್ರಾರಂಭವಾದ ಬಳಿಕ ಬಂದ ರಕ್ಷಕರ ಸಂಖ್ಯೆ ಎಷ್ಟು?

## ಭಾಗಾಕಾರ ಎಷ್ಟೊಂದು ಸುಲಭ

| | | |
|---|---|---|
| 8 ÷ 4 = 2 | 6 ÷ 3 = 2 | ...................... |
| 80÷ 4 = 20 | 60÷ 3 = 20 | ...................... |
| 800÷ 4 = 200 | 600÷ 3 = 200 | ...................... |

## ಪಟ್ಟಿಯನ್ನು ಪರಿಶೀಲಿಸಿ... ಸಂಬಂಧವನ್ನು ಕಂಡುಹಿಡಿಯಿರಿ

| | | | |
|---|---|---|---|
| 8 × 1 = 8 | 5 × 1 = 5 | 6 × 1 = 6 | ...................... |
| 8 ÷ 1 = 8 | 5 ÷ 1 = 5 | 6 ÷ 1 = 6 | ...................... |
| 8 ÷ 8 = 1 | 5 ÷ 5 = 1 | 6 ÷ 6 = 1 | ...................... |

### ನಾನು ಕಂಡುಕೊಂಡದ್ದು

### ಪಝ್ಲ್ ಕಾರ್ನರ್

- ಒಂದು ಸಂಖ್ಯೆಯನ್ನು 2 ರಿಂದ ಭಾಗಿಸುವ ಬದಲು 2 ರಿಂದ ಗುಣಿಸಲಾಯಿತು. ಉತ್ತರ 240 ಸಿಕ್ಕಿತು. ಸಂಖ್ಯೆಯನ್ನು 2 ರಿಂದ ಭಾಗಿಸುತ್ತಿದ್ದರೆ ಸಿಗುವ ಉತ್ತರ ಯಾವುದಾಗಿರುತ್ತಿತ್ತು?
- ಒಂದು ಸಂಖ್ಯೆಯನ್ನು 2 ರಿಂದ ಗುಣಿಸುವ ಬದಲು 2 ರಿಂದ ಭಾಗಿಸಲಾಯಿತು. ಉತ್ತರ 60 ಸಿಕ್ಕಿತು. ಸಂಖ್ಯೆಯನ್ನು 2 ರಿಂದ ಗುಣಿಸುತ್ತಿದ್ದರೆ ಸಿಗುವ ಉತ್ತರ ಯಾವುದಾಗಿರುತ್ತಿತ್ತು?
- ಒಂದು ಸಂಖ್ಯೆಯ ಅರ್ಧವನ್ನು ಲೆಕ್ಕ ಹಾಕುವ ಬದಲು ಇಮ್ಮಡಿಯನ್ನು ಕಂಡುಹಿಡಿಯಲಾಯಿತು. ಉತ್ತರ 100 ಸಿಕ್ಕಿತು. ಅರ್ಧವನ್ನು ಕಂಡುಹಿಡಿಯುತ್ತಿದ್ದರೆ ಉತ್ತರ ಎಷ್ಟಾಗುತ್ತಿತ್ತು?

1. ಸುಹರಾಳು ಒಂದು ಚೂಡಿದಾರ್ ಹೊಲಿಯಲು 250 ರೂಪಾಯಿಯನ್ನು ಕೂಲಿ ಪಡೆಯುತ್ತಾಳೆ. ಚೂಡಿದಾರ್ ಹೊಲಿದ ಸಲುವಾಗಿ ಅವಳಿಗೆ 1000 ರೂಪಾಯಿ ಕೂಲಿ ಸಿಕ್ಕಿತು. ಸುಹಾರಾ ಹೊಲಿದ ಚೂಡಿದಾರಗಳ ಸಂಖ್ಯೆ ಎಷ್ಟು? 10000 ರೂಪಾಯಿ ಲಭಿಸಬೇಕಾದರೆ ಎಷ್ಟು ಚೂಡಿದಾರಗಳನ್ನು ಹೊಲಿಯಬೇಕು?

2. ಸಿಯೂಸ್ ಮಾರುಕಟ್ಟೆಯಿಂದ 12 ಪ್ಯಾಕೆಟ್ ಪೆನ್ನುಗಳನ್ನು ಖರೀದಿಸಿದನು. ಪ್ರತಿ ಪ್ಯಾಕೆಟ್ ನಲ್ಲಿ ಅರ್ಧ ಡಜನ್ ಪೆನ್ನುಗಳಿವೆ. ಇವುಗಳನ್ನು 4 ರಂತೆ ಪ್ಯಾಕೆಟ್‌ಗಳಲ್ಲಿ ತುಂಬಿಸಿದರೆ ಎಷ್ಟು ಪ್ಯಾಕೆಟ್‌ಗಳಾಗುತ್ತದೆ?

3. 48 ನೋಟ್‌ಪುಸ್ತಕಗಳನ್ನು 5 ಮಂದಿಗೆ ಹಂಚಲಾಗುವುದು. ಮೊದಲನೇ ಮಗುವಿಗೆ 3 ನೋಟ್‌ಪುಸ್ತಕಗಳು ಹೆಚ್ಚು ಸಿಕ್ಕಿತು. ಉಳಿದವರಿಗೆ ಸಮಾನವಾಗಿ ಲಭಿಸಿತು. ಮೊದಲನೇ ಮಗುವಿಗೆ ಸಿಕ್ಕಿದ ನೋಟ್‌ಪುಸ್ತಕಗಳ ಸಂಖ್ಯೆ ಎಷ್ಟು?

4. ಪೆನ್ಸಿಲ್‌ಗಳ ಮಾರಾಟದಿಂದ ಮಿನ್ನಾಳಿಗೆ 3500 ರೂಪಾಯಿ ಸಿಕ್ಕಿತು. ಅವೆಲ್ಲವೂ 100 ರೂಪಾಯಿಯ ನೋಟುಗಳು. ನೋಟುಗಳ ಸಂಖ್ಯೆ ಎಷ್ಟು? ಅವುಗಳು 500 ರೂಪಾಯಿಯ ನೋಟುಗಳಾಗಿರುತ್ತಿದ್ದರೆ ಎಷ್ಟು ನೋಟುಗಳು ಸಿಗುತ್ತಿತ್ತು?

5. ಒಂದು ಪೆನ್ನಿನ ಬೆಲೆಯು ಒಂದು ಪೆನ್ಸಿಲ್‌ನ ಬೆಲೆಯ ಇಮ್ಮಡಿಯಾಗಿದೆ. ನೋಟು ಪುಸ್ತಕದ ಬೆಲೆಯು ಪೆನ್ನಿನ ಬೆಲೆಗಿಂತ ಎರಡು ಪಟ್ಟು ಹೆಚ್ಚಾಗಿದೆ. 6 ನೋಟ್‌ಪುಸ್ತಕಗಳ ಬೆಲೆ 72 ರೂಪಾಯಿ. ಹಾಗಾದರೆ ಒಂದು ಪೆನ್ಸಿಲ್‌ನ ಬೆಲೆ ಎಷ್ಟು?

6. ಮೇಧಾ ಮತ್ತು ಮಿತ್ರ ಸಮಾನ ಸಂಖ್ಯೆಯ ಗೊಂಬೆಗಳನ್ನು ತಯಾರಿಸಿದರು. ಮೇಧಾ ತಯಾರಿಸಿದ ಗೊಂಬೆಗಳ ಸಂಖ್ಯೆಯ ಅರ್ಧದೊಂದಿಗೆ 50 ನ್ನು ಸೇರಿಸಿದರೆ ಮಿತ್ರ ತಯಾರಿಸಿದ ಗೊಂಬೆಗಳ ಸಂಖ್ಯೆ ಸಿಗುತ್ತದೆ. ಹಾಗಾದರೆ, ಮಿತ್ರ ಎಷ್ಟು ಗೊಂಬೆಗಳನ್ನು ತಯಾರಿಸಿರಬಹುದು?

**ಅನ್ವೇಷಣೆ**

ಒಂದು ಕ್ಯಾಲೆಂಡರ್‌ನ ಸಮೀಪದ 4 ಕೋಣೆಗಳು ಸೇರಿದ ಚೌಕದ ಸಂಖ್ಯೆಗಳ ಮೊತ್ತವನ್ನು 4 ರಿಂದ ಭಾಗಿಸಿರಿ. ಲಭಿಸಿದ ಉತ್ತರಕ್ಕೂ ಕೋಣೆಯ ಮೊದಲನೇ ಸಂಖ್ಯೆಗೂ ಇರುವ ಸಂಬಂಧವನ್ನು ಕಂಡುಹಿಡಿಯಿರಿ.

# 10

# ಅಳೆದೂ ತೂಕ ಮಾಡಿಯೂ



ಮಿಲನ್‌ನ ಅಕ್ಕನ ಮದುವೆ. ಸಿದ್ಧತೆಗಳು ಆರಂಭವಾಗಿದೆ.
ಚಿತ್ರವನ್ನು ನೋಡಿರಿ...

## ಯಾವೆಲ್ಲಾ ವಸ್ತುಗಳು?

ಖರೀದಿಸಬೇಕಾದ ವಸ್ತುಗಳ ಪಟ್ಟಿಯೊಂದಿಗೆ ಮಿಲನ್ ಮತ್ತು ತಂದೆ ಅಂಗಡಿಗೆ ಬಂದರು.



| | |
|---|---|
| ಉಪ್ಪು | 5 ಕಿಲೋಗ್ರಾಂ |
| ಅಕ್ಕಿ | 150 ಕಿಲೋಗ್ರಾಂ |
| ಎಣ್ಣೆ | 50 ಲೀಟರ್ |
| ಸಕ್ಕರೆ | 150 ಕಿಲೋಗ್ರಾಂ |
| ಹೆಸರುಬೇಳೆ | 75 ಕಿಲೋಗ್ರಾಂ |
| ಹಾಲು | 125 ಲೀಟರ್ |
| ಮೊಸರು | 50 ಲೀಟರ್ |
| ಬೆಲ್ಲ | 60 ಕಿಲೋಗ್ರಾಂ |
| ಮೆಣಸು | 10 ಕಿಲೋಗ್ರಾಂ |
| ಕೊತ್ತಂಬರಿ | 10 ಕಿಲೋಗ್ರಾಂ |
| ಈರುಳ್ಳಿ | 30 ಕಿಲೋಗ್ರಾಂ |
| ವಿನೇಗರ್ | 3 ಲೀಟರ್ |

ಪಟ್ಟಿಯನ್ನು ನೋಡಿದಿರಲ್ಲವೇ. ಇವುಗಳಲ್ಲಿ ತೂಕ ಮಾಡಿ ಖರೀದಿಸುವವುಗಳು ಯಾವುವು?

| ತೂಕ ಮಾಡಿ ಖರೀದಿಸುವವುಗಳು | ಅಲ್ಲದವುಗಳು |
|---|---|
| | |

## ಅಂಗಡಿಗೆ

ಅಂಗಡಿಯ ಸ್ಟೋಕ್ ವಿವರಗಳನ್ನು ನೋಡಿರಿ.




| | |
|---|---|
| 1000 ಗ್ರಾಂ | → 1 ಕಿಲೋಗ್ರಾಂ |
| 100 ಕಿಲೋಗ್ರಾಂ | → 1 ಕ್ವಿಂಟಾಲ್ |
| 1000 ಕಿಲೋಗ್ರಾಂ | → 1 ಟನ್ |
| 10 ಕ್ವಿಂಟಾಲ್ | → 1 ಟನ್ |

ಅಂಗಡಿಯಲ್ಲಿ ಎಷ್ಟು ಕಿಲೋಗ್ರಾಂ ಅಕ್ಕಿ ಸ್ಟೋಕ್ ಇದೆ?

ಉದ್ದು?

ಅರ್ಧ ಕ್ವಿಂಟಾಲ್ ಗೋಡಂಬಿಯು ಎಷ್ಟು ಕಿಲೋಗ್ರಾಂ ಆಗಿದೆ?

**ನಾನು ಲೆಕ್ಕ ಮಾಡಿದ ರೀತಿ**

## ಸ್ಟೋಕ್ ನೋಡಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವಸ್ತು | ಸ್ಟೋಕ್ | ಕಿಲೋಗ್ರಾಂ |
|---|---|---|
| ಸಕ್ಕರೆ | 4 ಟನ್ | .............................. |
| ಹೆಸರುಬೇಳೆ | .............................. | .............................. |
| ಮೆಣಸು | .............................. | .............................. |
| ಬಗಡೆ | .............................. | .............................. |
| ಬೆಲ್ಲ | .............................. | .............................. |
| ಒಣದ್ರಾಕ್ಷಿ | ಕಾಲು ಕ್ವಿಂಟಾಲ್ | .............................. |

## ಒಂದು ಟನ್

ವಸ್ತುಗಳನ್ನು ತುಂಬಿದ ಲಾರಿಯು ಅಂಗಡಿಗೆ ತಲುಪಿತು.



50 ಕಿಲೋ ಗ್ರಾಂಗಳ 2 ಗೋಣಿಚೀಲಗಳು ಸೇರಿದರೋ?

ಒಂದು ಗೋಣಿಚೀಲದಲ್ಲಿ 50 ಕಿಲೋಗ್ರಾಂ ಅಕ್ಕಿ ಇದೆ.

1 ಟನ್ ಆಗಲು 50 ಕಿಲೋಗ್ರಾಂ ಭಾರವಿರುವ ಎಷ್ಟು ಗೋಣಿಚೀಲಗಳು ಬೇಕು?

**ನಾನು ಲೆಕ್ಕ ಮಾಡಿದ ರೀತಿ**

25 ಕಿಲೋಗ್ರಾಂ ಭಾರವಿರುವ ಎಷ್ಟು ಗೋಣಿಚೀಲಗಳು ಸೇರಿದರೆ 1 ಟನ್ ಆಗುವುದು?

## ಟನ್ ಮತ್ತು ಕ್ವಿಂಟಾಲ್

ಅಂಗಡಿಯಲ್ಲಿ ಇಳಿಸಿದ ವಸ್ತುಗಳ ಪಟ್ಟಿಯನ್ನು ನೋಡಿರಿ. ಭಾರವನ್ನು ಲೆಕ್ಕ ಮಾಡಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವಸ್ತು | ಗೋಣಿಚೀಲಗಳ ಸಂಖ್ಯೆ | ಒಂದು ಗೋಣಿಚೀಲದ ಭಾರ (ಕಿಲೋಗ್ರಾಂ) | ಒಟ್ಟು ಭಾರ | | |
|---|---|---|---|---|---|
| | | | ಕಿಲೋಗ್ರಾಂ | ಕ್ವಿಂಟಾಲ್ | ಟನ್ |
| ಅಕ್ಕಿ | 40 | 50 | | | |
| ಸಕ್ಕರೆ | 20 | 50 | | | |
| ಹೆಸರುಬೇಳೆ | 25 | 20 | | | |
| ಉದ್ದು | 5 | 10 | | | |
| ಬಗಡೆ | 5 | 50 | | | |
| ಮೆಣಸು | 4 | 50 | | | |

## ಬಾಕಿ ಲೆಕ್ಕ ಹಾಕುವ

ಔತಣ ಕೂಟಕ್ಕೆ ಬೇಕಾದ ಕೆಲವೊಂದು ವಸ್ತುಗಳನ್ನು ಅಂಗಡಿಯವನು ಒಂದು ಕಿಲೋಗ್ರಾಂ ಪ್ಯಾಕೆಟ್‌ನಿಂದ ತೂಕ ಮಾಡಿ ತೆಗೆದುಕೊಟ್ಟನು. ಪ್ರತಿಯೊಂದು ಪ್ಯಾಕೆಟ್‌ನಲ್ಲಿ ಎಷ್ಟು ಬಾಕಿ ಉಳಿಯುವುದು?

| ವಸ್ತು | ಖರೀದಿಸಿದ ಭಾರ | ಬಾಕಿ |
|---|---|---|
| ಏಲಕ್ಕಿ | 250 ಗ್ರಾಂ | |
| ಗೋಡಂಬಿ | 900 ಗ್ರಾಂ | |
| ಒಣದ್ರಾಕ್ಷಿ | 1000 ಗ್ರಾಂ | |
| ಅರಶಿನ ಹುಡಿ | 750 ಗ್ರಾಂ | |
| ಜೀರಿಗೆ | 500 ಗ್ರಾಂ | |

ಖರೀದಿಸಿದ ವಸ್ತುಗಳ ಒಟ್ಟು ಭಾರ ಎಷ್ಟು?

. . . . . . ಕಿಲೋಗ್ರಾಂ . . . . . . . ಗ್ರಾಂ

## ಭಾರವೆಷ್ಟು?




ಕೆಳಗೆ ಕೊಟ್ಟಿರುವ ಅಳತೆಗಳ ಭಾರವನ್ನು ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ತ್ರಾಸಿನಲ್ಲಿ ಕಾಣುವುದು | ಭಾರ |
|---|---|
| 10.000 | ............................... |
| 13.070 | 13 ಕಿಲೋ 70 ಗ್ರಾಂ |
| 7.250 | ............................... |
| 0.500 | ............................... |
| 1.005 | ............................... |
| 9.900 | ............................... |

## ಒಂದು ಕ್ವಿಂಟಾಲ್ ಇದೆಯೋ?




ಮಿಲನ್ ಮತ್ತು ತಂದೆ ಖರೀದಿಸಿದ ತರಕಾರಿಗಳನ್ನು ಆಟೋರಿಕ್ಷಾದಲ್ಲಿ ತುಂಬಿಸಿದರು.

| | |
|---|---|
| ಬೆಂಡೆ | 10 ಕಿಲೋಗ್ರಾಂ |
| ಚೀನಿಕಾಯಿ | 25 ಕಿಲೋಗ್ರಾಂ |
| ಬಟಾಟೆ | 50 ಕಿಲೋಗ್ರಾಂ |
| ಟೊಮೇಟೊ | 15 ಕಿಲೋಗ್ರಾಂ |
| ಕಾಯಿಮೆಣಸು | 2500 ಗ್ರಾಂ |
| ಮಾವು | 5 ಕಿಲೋಗ್ರಾಂ |
| ಕ್ಯಾರೆಟ್ | 10 ಕಿಲೋಗ್ರಾಂ |
| ಈರುಳ್ಳಿ | 30 ಕಿಲೋಗ್ರಾಂ |
| ಶುಂಠಿ | 3500 ಗ್ರಾಂ |

ವಸ್ತುಗಳ ಒಟ್ಟು ಭಾರವು ಒಂದು ಕ್ವಿಂಟಾಲ್‌ಗಿಂತ ಹೆಚ್ಚೋ? ಕಡಿಮೆಯೋ?

ಒಟ್ಟು ಭಾರ ................... ಕಿಲೋಗ್ರಾಂ

ಒಂದು ಕ್ವಿಂಟಾಲ್ 100 ಕಿಲೋಗ್ರಾಂ

ಒಂದು ಕ್ವಿಂಟಾಲ್‌ಗಿಂತ ಹೆಚ್ಚೋ? ಕಡಿಮೆಯೋ? ............................

ಎಷ್ಟು ಹೆಚ್ಚು / ಕಡಿಮೆ? ............................

## ಪ್ಯಾಕೆಟ್‌ಗಳೆಷ್ಟು?

ಒಂದು ಕಿಲೋಗ್ರಾಂನ ಪ್ಯಾಕೆಟ್‌ಗಳು ಸಾಕಷ್ಟು ಇಲ್ಲವಾದುದರಿಂದ ಕಾಲು ಕಿಲೋಗ್ರಾಂನ 2 ಪ್ಯಾಕೆಟ್ ಮತ್ತು ಅರ್ಧ ಕಿಲೋಗ್ರಾಂನ 3 ಪ್ಯಾಕೆಟ್ ಸೇರಿಸಿ ಅಂಗಡಿಯವನು ಕೊತ್ತಂಬರಿಯನ್ನು ನೀಡಿದನು. ಹೀಗೆ 10 ಕಿಲೋಗ್ರಾಂ ಕೊಟ್ಟಾಗ ಒಟ್ಟು ಎಷ್ಟು ಪ್ಯಾಕೆಟ್ ಆಯಿತು? ಲೆಕ್ಕ ಹಾಕುವುದು ಹೇಗೆ?

ಕಾಲು ಕಿಲೋಗ್ರಾಂನ 2 ಪ್ಯಾಕೆಟ್ ಸೇರಿದರೆ ಎಷ್ಟು ಗ್ರಾಂ ಆಗುತ್ತದೆ?

ಅರ್ಧ ಕಿಲೋಗ್ರಾಂನ 3 ಪ್ಯಾಕೆಟ್ ಸೇರಿದರೋ?

ಒಟ್ಟು ಭಾರ ಎಷ್ಟು?

10 ಕಿಲೋಗ್ರಾಂ ಆಗಲು ಇನ್ನು 1 ಕಿಲೋಗ್ರಾಂನ ಎಷ್ಟು ಪ್ಯಾಕೆಟ್‌ಗಳು ಬೇಕು?

ಎಲ್ಲವೂ ಅರ್ಧ ಕಿಲೋಗ್ರಾಂ ಪ್ಯಾಕೆಟ್‌ಗಳಾದರೆ ಎಷ್ಟು ಪ್ಯಾಕೆಟ್‌ಗಳು ಇರಬಹುದು?

ಎಲ್ಲವೂ ಕಾಲು ಕಿಲೋಗ್ರಾಂ ಪ್ಯಾಕೆಟ್‌ಗಳಾಗಿರುತ್ತಿದ್ದರೆ?

## ತುಪ್ಪವೆಷ್ಟು?

ತುಪ್ಪ ಖರೀದಿಸುವಾಗ ಅಂಗಡಿಯವನು 250 ಮಿಲ್ಲಿಲೀಟರ್‌ನ 2 ಬಾಟಲಿ ತುಪ್ಪ ಮತ್ತು 500 ಮಿಲ್ಲಿಲೀಟರ್‌ನ 1 ಬಾಟಲಿ ತುಪ್ಪವನ್ನು ನೀಡಿದನು.

ಎಷ್ಟು ತುಪ್ಪವನ್ನು ಖರೀದಿಸಲಾಯಿತು?

ಎಲ್ಲವೂ 100 ಮಿಲ್ಲಿಲೀಟರ್‌ನ ಬಾಟಲಿಗಳಾದರೆ ಎಷ್ಟು ಬಾಟಲಿ ತುಪ್ಪ ಇರಬಹುದು?

ಎಲ್ಲವೂ 250 ಮಿಲ್ಲಿಯ ಬಾಟಲಿಗಳಾಗಿರುತ್ತಿದ್ದರೆ?

## ಮರಳಿ ಮನೆಗೆ

ಗೂಡ್ಸ್ ಆಟೋದಲ್ಲಿ 635 ಕಿಲೋ ಗ್ರಾಂ ದಿನಸಿ ವಸ್ತುಗಳು ಮತ್ತು 375 ಕಿಲೋ ಗ್ರಾಂ ತರಕಾರಿಗಳನ್ನು ತುಂಬಿಸಿದರು. ತುಂಬಿಸಿದ ವಸ್ತುಗಳ ಒಟ್ಟು ಭಾರ ಎಷ್ಟು?



## ವಾಟರ್ ಟ್ಯಾಂಕ್

1000 ಲೀಟರ್‌ನ ಒಂದು ಟ್ಯಾಂಕ್, 500 ಲೀಟರಿನ ಒಂದು ಟ್ಯಾಂಕ್ ಮತ್ತು 200 ಲೀಟರಿನ 2 ಟ್ಯಾಂಕ್‌ಗಳಿವೆ. ಎಲ್ಲಾ ಟ್ಯಾಂಕ್‌ಗಳಲ್ಲಿ ನೀರು ತುಂಬಿಸಬೇಕು. ಒಟ್ಟು ಎಷ್ಟು ಲೀಟರ್ ನೀರನ್ನು ತುಂಬಿಸಬಹುದು?

ಟ್ಯಾಂಕ್ 1 = .......... ಲೀಟರ್

ಟ್ಯಾಂಕ್ 2 = .......... ಲೀಟರ್

ಟ್ಯಾಂಕ್ 3 = .......... ಲೀಟರ್

ಟ್ಯಾಂಕ್ 4 = .......... ಲೀಟರ್

ಒಟ್ಟು ನೀರು = .......... ಲೀಟರ್



1. ಜಾನಿ ಒಬ್ಬ ಮರಗೆಣಸು ಕೃಷಿಕ. ಬೆಳೆ ತೆಗೆದಾಗ, ಅವನಿಗೆ 2 ಕ್ವಿಂಟಾಲ್ 65 ಕಿಲೋಗ್ರಾಂ ಮರಗೆಣಸು ಸಿಕ್ಕಿತು. ಅದನ್ನು ಪ್ರತಿ ಕಿಲೋಗ್ರಾಂಗೆ 20 ರೂಪಾಯಿಗಳಂತೆ ಮಾರಾಟ ಮಾಡಿದನು. ಅವನಿಗೆ ಸಿಕ್ಕಿದ ಒಟ್ಟು ಹಣ ಎಷ್ಟು?
2. ಒಂದು ಗೋಣಿಚೀಲದಲ್ಲಿ 50 ಕಿಲೋಗ್ರಾಂ ಅಕ್ಕಿ ಇದೆ. ಮಿಲ್ಲಿನಿಂದ 60 ಗೋಣಿಚೀಲ ಅಕ್ಕಿಯನ್ನು ಲಾರಿಗೆ ತುಂಬಿಸಲಾಯಿತು. ಲಾರಿಗೆ ಎಷ್ಟು ಟನ್ ಅಕ್ಕಿಯನ್ನು ತುಂಬಿಸಲಾಯಿತು?
3. 2000 ಲೀಟರ್ ನೀರು ಹಿಡಿಯುವ ಟ್ಯಾಂಕ್ ತುಂಬಲು ಇನ್ನೂ 765 ಲೀಟರ್ ನೀರು ಬೇಕು. ಹಾಗಾದರೆ ಈಗ ಟ್ಯಾಂಕ್‌ನಲ್ಲಿ ಎಷ್ಟು ಲೀಟರ್ ನೀರು ಇದೆ?

4. ಮಾವೇಲಿ ಸ್ಟೋರ್‌ನಿಂದ ಬಿನು ಖರೀದಿಸಿದ ವಸ್ತುಗಳ ಪಟ್ಟಿಯನ್ನು ಕೊಡಲಾಗಿದೆ. ಅವನು ಅವುಗಳನ್ನು ಬಟ್ಟೆ ಚೀಲದಲ್ಲಿ ತುಂಬಿಸಿದನು. ಚೀಲದಲ್ಲಿರುವ ವಸ್ತುಗಳ ಒಟ್ಟು ಭಾರ ಎಷ್ಟು ಕಿಲೋಗ್ರಾಂ ಆಗಿದೆ?

| | | | |
|---|---|---|---|
| ಮಟ್ಟ ಅಕ್ಕಿ | - 2 ಕಿಲೋಗ್ರಾಂ | ಪಚ್ಚೆಹೆಸರು | - 500 ಗ್ರಾಂ |
| ಸಕ್ಕರೆ | - 1500 ಗ್ರಾಂ | ಬಗಡೆ | - 500 ಗ್ರಾಂ |
| ಮೆಣಸಿನ ಹುಡಿ | - 250 ಗ್ರಾಂ | ಕಡಲೆ | - 500 ಗ್ರಾಂ |
| ಕೊತ್ತಂಬರಿ ಹುಡಿ | - 250 ಗ್ರಾಂ | ಗೋಧಿ ಹುಡಿ | - 2 ಕಿಲೋಗ್ರಾಂ |
| ಹೆಸರುಬೇಳೆ | - 500 ಗ್ರಾಂ | | |

5. ಎಣ್ಣೆ ವ್ಯಾಪಾರಿಯು ತನ್ನಲ್ಲಿದ್ದ ಎಣ್ಣೆಯನ್ನು 500 ಮಿಲ್ಲಿಲೀಟರ್‌ನ 5 ಬಾಟಲಿಗಳು ಮತ್ತು 200 ಮಿಲ್ಲಿಲೀಟರ್‌ನ 6 ಬಾಟಲಿಗಳಲ್ಲಿ ತುಂಬಿಸಿದನು. ಪಾತ್ರೆಯಲ್ಲಿ 1 ಲೀಟರ್ 300 ಮಿಲ್ಲಿಲೀಟರ್ ಎಣ್ಣೆ ಬಾಕಿ ಉಳಿಯಿತು. ಹಾಗಾದರೆ ಅವನಲ್ಲಿದ್ದ ಎಣ್ಣೆ ಎಷ್ಟು?

6. ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಗ್ರಾಂ | ಕಿಲೋಗ್ರಾಂ | ಕಿಲೋಗ್ರಾಂ ಮತ್ತು ಗ್ರಾಂನಲ್ಲಿ |
|---|---|---|
| 2500 | .................... | 2 ಕಿ ಗ್ರಾಂ 500 ಗ್ರಾಂ |
| 3250 | ಮೂರು ಕಾಲು | .................... |
| .................... | ಒಂದು ಮುಕ್ಕಾಲು | .................... |
| .................... | .................... | 4 ಕಿ ಗ್ರಾಂ 250 ಗ್ರಾಂ |

7. ಹಾಲು ಸೊಸೈಟಿಗೆ ಸೋಮವಾರದಂದು 550 ಲೀಟರ್ 750 ಮಿಲ್ಲಿಲೀಟರ್ ಹಾಲು ಸಿಕ್ಕಿತು. 85 ಲೀಟರ್ 250 ಮಿಲ್ಲಿಲೀಟರ್ ಹಾಲು ಸೊಸೈಟಿಯಲ್ಲಿಯೇ ಮಾರಾಟವಾಯಿತು. ಉಳಿದ ಹಾಲನ್ನು ಮಿಲ್ಮಕ್ಕೆ ನೀಡಲಾಯಿತು. ಮಿಲ್ಮಕ್ಕೆ ನೀಡಿದ ಹಾಲಿನ ಅಳತೆ ಎಷ್ಟು?

8. ಶಾಲೆಯಲ್ಲಿ ಓಣಂ ಹಬ್ಬದ ತಯಾರಿ ನಡೆಯುತ್ತಿದೆ.

- 100 ಮಿಲ್ಲಿಲೀಟರ್ ಹಿಡಿಯುವ ಲೋಟದಲ್ಲಿ ಪಾಯಸ ನೀಡಲಾಗುತ್ತದೆ. 1000 ಜನರಿಗೆ ನೀಡಲು ಎಷ್ಟು ಲೀಟರ್ ಪಾಯಸ ಬೇಕು?
- 1 ಕಿಲೋಗ್ರಾಂ ಅಕ್ಕಿಯ ಅನ್ನವನ್ನು 8 ಜನರಿಗೆ ಉಣ್ಣಬಹುದು ಎಂದು ಅಂದಾಜಿಸಲಾಗಿದೆ. 100 ಕಿಲೋಗ್ರಾಂ ಅಕ್ಕಿಯ ಅನ್ನ ಮಾಡಿದರೆ ಎಷ್ಟು ಜನರಿಗೆ ಉಣಲು ಸಾಧ್ಯ?

# 11
# ಕಥೆ ಹೇಳುವ ಚಿತ್ರಗಳು

ಚಿತ್ರವನ್ನು ನೋಡುವ... ಕಂಡುಹಿಡಿಯುವ...







ಚೆಲ್ಲಕ್ಕಾಡ್ ಸರಕಾರಿ ಎಲ್. ಪಿ. ಶಾಲೆಯ ಮಕ್ಕಳು
ಅಗ್ರಿ ಫಾರ್ಮ್ ಸಂದರ್ಶಿಸುತ್ತಿದ್ದಾರೆ.

## ಚಿತ್ರ ನೋಡಿರಿ... ಕಂಡುಹಿಡಿಯಿರಿ.




ಅಗ್ರಿಫಾರ್ಮಿನ ಚಿತ್ರವನ್ನು ನೋಡಿ ನೀವು ಕಂಡುಹಿಡಿದವುಗಳನ್ನು ಬರೆಯಿರಿ.

ಗೆಳೆಯರೊಂದಿಗೂ ಚರ್ಚಿಸಿರಿ.

**ನಾನು ಕಂಡುಕೊಂಡದ್ದು**

ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಜೀವಿ |  |  |  |  |  |  |
|---|---|---|---|---|---|---|
| ಸಂಖ್ಯೆ | | | | | | |

ಪಟ್ಟಿಯನ್ನು ನೋಡಿ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

- ಅಗ್ರಿಫಾರ್ಮಿನಲ್ಲಿ ಅತಿ ಹೆಚ್ಚು ಇರುವ ಜೀವಿ ಯಾವುದು?
- ದನಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಜೀವಿಗಳು ಯಾವುವು?
- ಅತಿ ಕಡಿಮೆ ಇರುವ ಜೀವಿ ಯಾವುದು?
- ಒಟ್ಟು ಎಷ್ಟು ಜೀವಿಗಳಿವೆ?

## ಚೆಲ್ಲಕ್ಕಾಡ್ ಸರಕಾರಿ ಎಲ್. ಪಿ. ಶಾಲೆ

ಚೆಲ್ಲಕ್ಕಾಡ್ ಶಾಲೆಯ ದೃಶ್ಯವನ್ನು ನೋಡಿರಿ.




ಮಕ್ಕಳು ಶಾಲೆಗೆ ಬರುವ ರೀತಿಯನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ. (ಪ್ರತಿಯೊಂದು ಮಗುವಿನ ಚಿತ್ರವು 5 ಮಕ್ಕಳ ಸಂಖ್ಯೆಯನ್ನು ಸೂಚಿಸುತ್ತದೆ.)

| ಮಕ್ಕಳು ಶಾಲೆಗೆ ಬರುವ ರೀತಿ | ಹುಡುಗಿಯರು | ಹುಡುಗರು |
|---|---|---|
|  |  |  |
|  |  |  |
|  |  |  |
|  |  |  |
|  |  |  |
|  |  |  |

ಪಟ್ಟಿಯಿಂದ ಏನೆಲ್ಲಾ ಅರ್ಥೈಸಿಕೊಳ್ಳಬಹುದು?

ಗೆಳೆಯರೊಂದಿಗೆ ಚರ್ಚೆ ಮಾಡಿರಿ. ಕಂಡುಕೊಂಡದ್ದನ್ನು ಬರೆಯಿರಿ.

**ನಾನು ಕಂಡುಕೊಂಡದ್ದು**

**ಉತ್ತರ ಬರೆಯಿರಿ**

- ಆಟೋ ರಿಕ್ಷಾದಲ್ಲಿ ಶಾಲೆಗೆ ಬರುವ ಹುಡುಗಿಯರ ಸಂಖ್ಯೆ ಎಷ್ಟು?
- ಸೈಕಲಿನಲ್ಲಿ ಶಾಲೆಗೆ ಬರುವ ಹುಡುಗರ ಸಂಖ್ಯೆ ಎಷ್ಟು?
- ಅತಿ ಹೆಚ್ಚು ಮಕ್ಕಳು ಶಾಲೆಗೆ ಬರುವ ರೀತಿ ಯಾವುದು?

ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಬರೆಯಿರಿ. ಉತ್ತರವನ್ನು ಕಂಡುಹಿಡಿಯಿರಿ.

-
-
-
-
-
-
-

ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವಾಹನ |  |  |  |  |  |  |
|---|---|---|---|---|---|---|
| ಹುಡುಗಿಯರು | 25 | | | | | |
| ಹುಡುಗರು | | 60 | | | | |
| **ಒಟ್ಟು** | | | | | | |

**ಪಟ್ಟಿಯನ್ನು ನೋಡಿ ಉತ್ತರವನ್ನು ಬರೆಯಿರಿ.**

- ಶಾಲೆಯಲ್ಲಿ ಒಟ್ಟು ಎಷ್ಟು ಹುಡುಗಿಯರು ಕಲಿಯುತ್ತಿದ್ದಾರೆ?
- ಹುಡುಗರ ಸಂಖ್ಯೆ ಎಷ್ಟು?
- ಶಾಲೆಗೆ ನಡೆದುಕೊಂಡು ಬರುವ ಮಕ್ಕಳ ಸಂಖ್ಯೆ ಎಷ್ಟು?

ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಬರೆಯಿರಿ. ಉತ್ತರವನ್ನು ಕಂಡುಹಿಡಿಯಿರಿ.

- 
- 
- 
- 
- 

**ಪಟ್ಟಿ ತಯಾರಿಸಿರಿ.**

ನಿಮ್ಮ ತರಗತಿಯ ಗೆಳೆಯರು ಶಾಲೆಗೆ ಬರುವ ರೀತಿಯ ವಿವರಗಳನ್ನು ಕೇಳಿ ತಿಳಿದುಕೊಳ್ಳಿರಿ. ಈ ಮಾಹಿತಿಗಳನ್ನು ಉಪಯೋಗಿಸಿ ನಿಮ್ಮ ನೋಟ್ ಪುಸ್ತಕದಲ್ಲಿ ಪಟ್ಟಿಯನ್ನು ತಯಾರಿಸಿರಿ.

## ಮರ ಒಂದು ವರ




ಚಿತ್ರವನ್ನು ನೋಡಿರಿ.
ಚಿತ್ರದಿಂದ ನೀವು ತಿಳಿದುಕೊಂಡ ವಿಚಾರಗಳನ್ನು ಬರೆಯಿರಿ.

**ನಾನು ಕಂಡುಕೊಂಡದ್ದು**

- ನಿಮಗೆ ಯಾವೆಲ್ಲಾ ಕಡೆಗಳಿಂದ ಗಿಡಗಳು ಸಿಗುತ್ತವೆ?

- ನೀವು ಇದುವರೆಗೆ ನೆಟ್ಟು ಬೆಳೆಸಿದ ಗಿಡಗಳ ಹೆಸರು ಬರೆಯಿರಿ.

ಚೆಲ್ಲಕ್ಕಾಡು ಗ್ರಾಮ ಪಂಚಾಯತ್ ಮೊದಲ ಹಂತದಲ್ಲಿ ವಿತರಿಸುವ ಸಸಿಗಳ ವಿವರಗಳು ಕೆಳಗಿನ ಪಟ್ಟಿಯಲ್ಲಿದೆ. ಒಂದು ಸಸಿಯ ಚಿತ್ರವು 10 ಸಸಿಗಳನ್ನು ಸೂಚಿಸುವಂತೆ ಚಿತ್ರ ಬಿಡಿಸಿರಿ. ಖಾಲಿ ಬಿಟ್ಟ ಕೋಣೆಗಳಲ್ಲಿ ಸಂಖ್ಯೆಯನ್ನು ಬರೆಯಿರಿ.

| ಗಿಡ | ಸಂಖ್ಯೆ | ಸಂಖ್ಯೆ(ಚಿತ್ರರೂಪದಲ್ಲಿ) |
|---|---|---|
| ಮಾವು | |  |
| ಹಲಸು | 80 | |
| ಸಾಗುವಾನಿ | 50 | |
| ಕಣಿಕೊನ್ನೆ | 60 | |
| ಹುಳಿ | |  |
| ಚಿಕ್ಕು | 10 | |

**ಪಟ್ಟಿಯನ್ನು ನೋಡಿ ಉತ್ತರ ಬರೆಯಿರಿ.**

- ಅತಿ ಹೆಚ್ಚು ಇರುವ ಗಿಡ ಯಾವುದು?
- ಹಲಸಿನ ಗಿಡಗಳು ಎಷ್ಟಿವೆ?

ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ತಯಾರಿಸಿ ನೋಟ್ ಪುಸ್ತಕದಲ್ಲಿ ಬರೆಯಿರಿ. ಉತ್ತರವನ್ನು ಬರೆಯಿರಿ.

## ಕ್ವಿಜ್ ಸ್ಪರ್ಧೆ

ಚೆಲ್ಲಕ್ಕಾಡ್ ಸರಕಾರಿ ಎಲ್. ಪಿ. ಶಾಲೆಯಲ್ಲಿ ನಡೆದ ಗಣಿತ ಕ್ವಿಜ್‌ನಲ್ಲಿ ಭಾಗವಹಿಸಿದ ಮಕ್ಕಳ ಹೆಸರು ಮತ್ತು ಅವರಿಗೆ ಲಭಿಸಿದ ಪೋಯಿಂಟ್‌ಗಳನ್ನು ಬರೆದ ಚಾರ್ಟನ್ನು ಕೆಳಗೆ ನೀಡಲಾಗಿದೆ.

**ಸರಕಾರಿ ಎಲ್. ಪಿ. ಶಾಲೆ, ಚೆಲ್ಲಕ್ಕಾಡ್**
**ಗಣಿತ ಕ್ವಿಜ್ ಸ್ಪರ್ಧೆ**

| ಕ್ರಮ ಸಂಖ್ಯೆ | ಹೆಸರು | ಪೋಯಿಂಟ್ | ಕ್ರಮ ಸಂಖ್ಯೆ | ಹೆಸರು | ಪೋಯಿಂಟ್ |
|---|---|---|---|---|---|
| 1 | ಅಯಾನ್ | 𝍸 \|\| | 7 | ನಯನ್ | 𝍸 𝍸 𝍸 \| |
| 2 | ರೂಪ | 𝍸 𝍸 \| | 8 | ಕೃಪ | 𝍸 \|\| |
| 3 | ಜಾನಿ | 𝍸 \|\|\|\| | 9 | ಜೀವ | 𝍸 \|\|\|\| |
| 4 | ಅನಸ್ | 𝍸 𝍸 \|\|\|\| | 10 | ಕರಣ್ | 𝍸 𝍸𝍸 \|\|\| |
| 5 | ಅಮೃತ್ | \|\|\| | 11 | ಜಿಷಿ | 𝍸 𝍸 |
| 6 | ಗೋಪು | 𝍸 𝍸 𝍸 𝍸 \|\| | 12 | ಸನು | 𝍸 \| |

ಚಾರ್ಟ್ ಪರಿಶೀಲಿಸಿರಿ... ಪ್ರತಿ ಮಗುವಿಗೆ ಲಭಿಸಿದ ಪೋಯಿಂಟ್ ಎಷ್ಟೆಂದು ಹೇಗೆ ತಿಳಿಯಬಹುದು?

ಗೆಳೆಯರೊಂದಿಗೆ ಚರ್ಚಿಸಿರಿ.

ಕಂಡುಕೊಂಡದ್ದನ್ನು ಬರೆಯಿರಿ.

> 𝍸 ಈ ರೀತಿ ನಾಲ್ಕು ಗೆರೆಗಳನ್ನು ಮತ್ತು ಅದರ ಮೇಲೆ ಅಡ್ಡ ಗೆರೆಯನ್ನು ಎಳೆದರೆ 5 ಪೋಯಿಂಟ್ ಆಗುವುದು.

**ನಾನು ಕಂಡುಕೊಂಡದ್ದು**

ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕ್ರಮ ಸಂಖ್ಯೆ | ಹೆಸರು | ಪೋಯಿಂಟ್ | ಕ್ರಮ ಸಂಖ್ಯೆ | ಹೆಸರು | ಪೋಯಿಂಟ್ |
|---|---|---|---|---|---|
| 1 | ಅಯಾನ್ | | 7 | ನಯನ್ | |
| 2 | ರೂಪ | | 8 | ಕೃಪ | |
| 3 | ಜಾನಿ | | 9 | ಜೀವ | |
| 4 | ಅನಸ್ | | 10 | ಕರಣ್ | |
| 5 | ಅಮೃತ್ | | 11 | ಜಿಷಿ | |
| 6 | ಗೋಪು | | 12 | ಸನು | |

- ಅತಿ ಹೆಚ್ಚು ಪೋಯಿಂಟ್ ಲಭಿಸಿದ್ದು ಯಾರಿಗೆ?

ಎಷ್ಟು ಪೋಯಿಂಟ್?

## ಪೋಯಿಂಟ್ ಕಂಡುಹಿಡಿಯುವ

ಚೆಲ್ಲಕ್ಕಾಡ್ ಸರಕಾರಿ ಎಲ್. ಪಿ. ಶಾಲೆಯ ಮೂವರು ಮಕ್ಕಳು ಉಪಜಿಲ್ಲಾ ಮಟ್ಟದ ಗಣಿತಶಾಸ್ತ್ರ ಕ್ವಿಜ್‌ನಲ್ಲಿ ಭಾಗವಹಿಸಿದರು. ಅವರಿಗೆ ಲಭಿಸಿದ ಪೋಯಿಂಟುಗಳನ್ನು ಕೆಳಗಿನ ಪಟ್ಟಿಯಲ್ಲಿ ಟ್ಯಾಲಿ ಗುರುತುಗಳಾಗಿ ಕೊಡಲಾಗಿದೆ. ಪೋಯಿಂಟ್‌ಗಳನ್ನು ಲೆಕ್ಕ ಮಾಡಿ ಬರೆಯಿರಿ.

| ಹೆಸರು | ಟ್ಯಾಲಿ ಗುರುತು | ಪೋಯಿಂಟ್ |
|---|---|---|
| ಕರಣ್ | 𝍸 𝍸 \|\|\|\| | |
| ನಯನ್ | 𝍸 𝍸 𝍸 | |
| ಗೋಪು | 𝍸 𝍸 𝍸 \|\|\| | |

ಚೆಲ್ಲಕ್ಕಾಡ್ ಸರಕಾರಿ ಎಲ್. ಪಿ. ಶಾಲೆಯಲ್ಲಿ ಲೈಬ್ರೆರಿ ನವೀಕರಣದ ಭಾಗವಾಗಿ ಪಿ.ಟಿ.ಎ. ಸದಸ್ಯರು 6 ಗುಂಪುಗಳಾಗಿ ಪುಸ್ತಕಗಳನ್ನು ಸಂಗ್ರಹಿಸಿದರು. ಸಂಗ್ರಹಿಸಿದ ಪುಸ್ತಕಗಳ ಸಂಖ್ಯೆಯನ್ನು ಚಿತ್ರಿಸಿರುವುದನ್ನು ನೋಡಿರಿ. (ಒಂದು ಪುಸ್ತಕದ ಚಿತ್ರವು 10 ಪುಸ್ತಕಗಳನ್ನು ಸೂಚಿಸುತ್ತದೆ.)
ಪುಸ್ತಕಗಳ ಸಂಖ್ಯೆಯನ್ನು ಪಟ್ಟಿಯಲ್ಲಿ ಬರೆಯಿರಿ.

| ಗುಂಪು | ಸಂಖ್ಯೆ ಚಿತ್ರರೂಪದಲ್ಲಿ | ಸಂಖ್ಯೆ |
|---|---|---|
| 1 |  | |
| 2 |  | |
| 3 |  | |
| 4 |  | |
| 5 |  | |
| 6 |  | |

1. ಒಂದನೇ ಗುಂಪಿಗಿಂತ ಆರನೇ ಗುಂಪಿನವರು ಎಷ್ಟು ಪುಸ್ತಕಗಳನ್ನು ಹೆಚ್ಚು ಸಂಗ್ರಹಿಸಿದರು?
2. ಸಮಾನ ಸಂಖ್ಯೆಯ ಪುಸ್ತಕಗಳನ್ನು ಸಂಗ್ರಹಿಸಿದ ಗುಂಪುಗಳು ಯಾವುವು?
3. ಮೂರನೇ ಗುಂಪು ಸಂಗ್ರಹಿಸಿದ ಪುಸ್ತಕಗಳ ಸಂಖ್ಯೆಗೆ ಸಮಾನವಾಗಲು, ಎರಡನೇ ಗುಂಪು ಇನ್ನು ಎಷ್ಟು ಪುಸ್ತಕಗಳನ್ನು ಸಂಗ್ರಹಿಸಬೇಕು?
4. ಒಟ್ಟು ಎಷ್ಟು ಪುಸ್ತಕಗಳನ್ನು ಸಂಗ್ರಹಿಸಲಾಯಿತು?

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000


***Online R.T.E Monitoring : www.nireekshana.org.in***